ಹಿನ್ನೆಲೆ*

ಗ್ರಂಥಗಳನ್ನು ಪೌರುಷೇಯ-ಅಪೌರುಷೇಯ ಎಂದು ಎರಡು ವಿಧವಾಗಿ ವಿಂಗಡಿಸುತ್ತಾರೆ. ಪೌರುಷೇಯವೆಂದರೆ ಪುರುಷಕೃತ, ಅಪೌರುಷೇಯವೆಂದರೆ ಪುರುಷಕೃತವಲ್ಲದ್ದೆಂದರ್ಥ. ಪುರುಷಕೃತ ಎಂದರೆ ಪುರುಷನು ಸ್ವಬುದ್ಧಿಯಿಂದ ರಚಿಸಿದ್ದೆಂದರ್ಥ. ಪುರುಷಕೃತವಲ್ಲವೆಂದರೆ ಪುರುಷನ ಬುದ್ಧಿಯಿಂದ ರಚಿತವಾದ್ದಲ್ಲವೆಂದರ್ಥ. ಪುರುಷನ ಬುದ್ಧಿಯಿಂದ ರಚಿತವಾದ್ದಲ್ಲವೆಂದರೆ, 'ಮತ್ತೆ ಯಾರ ಬುದ್ಧಿಯಿಂದ ರಚಿತವಾದ್ದೆಂಬ ಪ್ರಶ್ನೆ ಉದ್ಭವಿಸುತ್ತದೆ. ಯಾರ ಬುದ್ಧಿಯಿಂದಲೂ ರಚಿತವಾದುದ್ದಲ್ಲವೆಂದೇ ಅದರ ಅರ್ಥ. ಇಂತಹ ಒಂದು ಗ್ರಂಥ ಹೇಗಿರಲು ಸಾಧ್ಯ? ಎಂದು ಕೇಳಬಹುದು. ವೇದಗಳು ಬ್ರಹ್ಮರ್ಷಿಗಳ ಹೃದಯದಲ್ಲಿ ಅನಾಹತನಾದರೂಪವಾಗಿ ಆವಿರ್ಭವಿಸಿದವೆಂದೇ ಬಲ್ಲವರು ಹೇಳುತ್ತಾರೆ. ಅಂತಹ ನಾದವೊಂದು ಉಂಟೆಂಬುದು ಯೋಗಶಾಸ್ತ್ರವನ್ನು ಓದಿದರೆ ತಿಳಿಯಬಹುದು. ಹೀಗೆ ವೇದಗಳಿಗೆ ಹಿನ್ನೆಲೆಯಲ್ಲಿ ಯಾರ ಬುದ್ಧಿಯೂ ಇಲ್ಲದಿರುವುದರಿಂದಲೇ ಅವು ಅಪೌರುಷೇಯವೆನಿಸಿವೆ. ಆದ್ದರಿಂದಲೇ ವೇದಗಳು ವಿಶ್ವ ವಾಙ್ಮಯವಾಗಿ ಎಲ್ಲಾ ಕಾಲಕ್ಕೂ ಎಲ್ಲರಿಗೂ ಪ್ರಮಾಣರೂಪವಾದವು. ಬುದ್ಧಿಪೂರ್ವಕರಚನೆಯಾಗಿದ್ದಲ್ಲಿ, ಬುದ್ಧಿಯಲ್ಲಿ ಭ್ರಮೆ ಪ್ರಮಾದಾದಿಗಳ ಸಂಭವವಿರುವುದರಿಂದ ಅದರ ಪ್ರಾಮಾಣ್ಯದಲ್ಲಿ ಸಂಶಯಕ್ಕೆ ಅವಕಾಶವಿರುತ್ತದೆ. ವೇದಗಳು ಅಪೌರುಷೇಯವಾದ ಕಾರಣದಿಂದಲೇ ಅವುಗಳು ಸ್ವತಃ ಪ್ರಮಾಣವೆಂದು ಹೇಳುತ್ತಾರೆ. ಪೌರುಷೇಯವಾದ ಗ್ರಂಥಗಳಿಗೆ

---

* **'ಪುರುಷೇ ತ್ವಾವಿಸ್ತರಾಮಾತ್ಮಾ'** (ಆತ್ಮತತ್ತ್ವವು ಮಾನವಜನ್ಮದಲ್ಲೇ ಪೂರ್ಣವಾಗಿ ವಿಕಾಸವನ್ನು ಪಡೆಯುತ್ತದೆ). ಎಂದು ಮಾನವಜನ್ಮವನ್ನು ವೇದ ಪ್ರಶಂಸಿಸುತ್ತದೆ. ಯಾವ ಪ್ರಾಣಿಗಳಿಗೂ ಇಲ್ಲದ ಬುದ್ಧಿಯ ವಿಕಾಸವು ಮಾನವಜನ್ಮದಲ್ಲೇ ಪೂರ್ಣತ್ವವನ್ನು ಪಡೆಯುತ್ತದೆ. ಬುದ್ಧಿಯ ವಿಕಾಸಕ್ಕೆ ಸಹಕರಿಸುವ ಭಾಗವನ್ನು ವಿದ್ಯಾಸ್ಥಾನಗಳು ಎಂದು ಕರೆಯುತ್ತಾರೆ. ಇವು ೧೪ ವಿಧ. ಇವುಗಳಲ್ಲಿ 'ವೇದಾಂತಶಾಸ್ತ್ರ' ಎಂಬುದೇ ಕೊನೆಯ ಭಾಗ. ಮಾನವನ ವಿಕಾಸದ ಕೊನೆಯ ಹಂತ ಇದು ಎಂದು ಹೇಳುತ್ತಾರೆ. ಆದರೆ, ಈ ಭಾಗದಲ್ಲೇ ಅನೇಕ ವಿಧ ವ್ಯಾಖ್ಯಾನೋಪವ್ಯಾಖ್ಯಾನಗಳು ಹುಟ್ಟಿಕೊಂಡುಬಿಟ್ಟು ಗೊಂದಲಮಯವಾಗಿದೆ. 'ಸ್ನಾನ ಮಾಡಲು ಹೋಗಿ ಕೆಸರನ್ನು ಬಳಸಿಕೊಂಡಂತೆ' ವೇದಾಂತಶಾಸ್ತ್ರ ಕಾಮಕ್ರೋಧಮಯವಾಗಿ ಬಿಟ್ಟಿದೆ ಎಂದರೆ ಅತಿಶಯೋಕ್ತಿಯಲ್ಲ. ವೇದಾಂತಶಾಸ್ತ್ರದಲ್ಲಿ ಕಂಡು ಬರುವಷ್ಟು ಖಂಡನಮಂಡನಗಳು ಬೇರೆ ಯಾವ ಶಾಸ್ತ್ರದಲ್ಲೂ ಇಲ್ಲ. ಇದಕ್ಕೆ ಪ್ರಾಮಾಣಿಕವಾದ, ಉತ್ತರವನ್ನು ಕಂಡು ಹಿಡಿಯಲು ಮಾಡಿದ ಪ್ರಯತ್ನವೇ 'ಸತ್ಯಾನ್ವೇಷಣೆ'ಯಾಗಿದೆ. ಆ ಅನ್ವೇಷಣೆಯ ಸಂಗ್ರಹವೇ ಈ ಹಿನ್ನಲೆಯಾಗಿದೆ. ಇದು ಯಾವ ಒಂದು ಪಕ್ಷವನ್ನು ಸಮರ್ಥಿಸಲೋ ಅಥವಾ ಯಾವ ಒಂದು ಪಕ್ಷವನ್ನು ಖಂಡಿಸಲೋ ಮಾಡಿದ ಪ್ರಯತ್ನವಲ್ಲ **'ಮಹತಾ ಪುಣ್ಯಪಕ್ಯೇನ ಕ್ರೀತೇಯಂ ಕಾಯನೌಸ್ತ್ವಯಾ । ಗಂತುಂ ದುಃಖೋದಧೇಃ ಪಾರಂ ತ್ವರ ಯಾವನ್ನ ಭಿದ್ಯತೇ'** ।। ಎಂಬ ಮಹರ್ಷಿಗಳ ಮಾತಿಗೆ ನೇರ ವಿಪರೀತವಾಗಿದೆ ಪ್ರಾಯಃ ಪಂಡಿತರ ನಡೆ. ಈ 'ಹಿನ್ನೆಲೆ'ಯ ವಿಷಯ ಹೊಸ ಆವಿಷ್ಕಾರ ರೂಪದ್ದು ಮತ್ತು ಕೇವಲ ಈ ಲೇಖಕನ ಬುದ್ಧಿಯಿಂದ ಮಾತ್ರ ರಚಿತವಾದ್ದಲ್ಲದ ಕಾರಣ ಓದುಗರು ಸಾವಧಾನವಾಗಿ ಓದಬೇಕಾಗಿ ವಿನಂತಿ.

ಹಿನ್ನೆಲೆಯಲ್ಲಿ ಆಯಾ ಗ್ರಂಥದ ಕರ್ತೃವಿನ ಬುದ್ಧಿ ಅಥವಾ ಆಶಯವೂ ಇದ್ದೇ ಇರುವುದು. ಈ ಬುದ್ಧಿ ಪ್ರಮಾಣರೂಪವೆಂದು ನಿಶ್ಚಯವಾದರೆ, ಆ ಗ್ರಂಥವೂ ಪ್ರಮಾಣವಾಗಬಲ್ಲದ್ದು. ಇಲ್ಲದಿದ್ದರೆ ಆ ಕರ್ತೃವಿನ ಅಭಿಪ್ರಾಯವನ್ನು ಅರಿತು, ಅದಕ್ಕೆ ತಕ್ಕಂತೆ ನಿರ್ಣಯಿಸಬೇಕಾಗುತ್ತದೆ.

ವೇದದ ಮಹತ್ತ್ವವನ್ನು ವಿಶ್ವದ ವಿದ್ವಾಂಸರು ಎಲ್ಲರೂ ಬಲ್ಲರು. ಭಾರತದೇಶದ, ಭಾರತೀಯ ಸಂಸ್ಕೃತಿಗೆ ಈ ವೇದಗಳೇ ಮೂಲಾಧಾರವಾಗಿರುವುದು. ವೇದವು ವಿಶ್ವದ ಅತಿ ಪ್ರಾಚೀನ ವಾಙ್ಮಯವೆಂದು ವಿಶ್ವದಲ್ಲೇ ಪ್ರಸಿದ್ಧ. ಒಂದು ವಾಙ್ಮಯವು ಇಷ್ಟೊಂದು ಸಾವಿರಾರು ವರ್ಷಗಳು ಉಳಿಯಬೇಕಾದರೆ ಅದರ ಸತ್ತ್ವ ಎಷ್ಟಿರಬಹುದೆಂದು ಊಹಿಸಿಕೊಳ್ಳಬೇಕು.

ಶ್ರೀಶಂಕರಬ್ರಹ್ಮಸೂತ್ರಭಾಷ್ಯದ ಹಿನ್ನೆಲೆ

ಪ್ರಕೃತ ಭಗವದ್‌ರಾಮಾನುಜ ವಿರಚಿತವಾದ ಶ್ರೀಭಾಷ್ಯವೆಂಬ ಈ ಮಹಾನ್ ಗ್ರಂಥದ ಹಿನ್ನೆಲೆಯಲ್ಲಿರುವುದು ಯಾವುದು? ಇದು ಗೊತ್ತಾಗದೆ, ಈ ಗ್ರಂಥದ ಅಭಿಪ್ರಾಯವೂ ಗೊತ್ತಾಗುವಂತಿಲ್ಲ. ಇದರ ವೈಶಿಷ್ಟ್ಯವೂ ಗೊತ್ತಾಗುವುದಿಲ್ಲ. ಇದರ ಹಿನ್ನೆಲೆ ಗೊತ್ತಾಗಬೇಕಾದರೆ, ಶ್ರೀಶಂಕರಾಚಾರ್ಯರು ರಚಿಸಿರುವ ಮಹಾಕೃತಿಯಾದ ಬ್ರಹ್ಮಸೂತ್ರಭಾಷ್ಯದ ಹಿನ್ನೆಲೆಯು ಗೊತ್ತಾಗಲೇಬೇಕು. ಏಕೆಂದರೆ, ಎಷ್ಟೇ ಪರಮಪ್ರಮಾಣವಾದರೂ, ಈ ಎರಡು ಗ್ರಂಥಗಳು ಅಪೌರುಷೇಯವೆಂದೇ ಎಲ್ಲರೂ ಒಪ್ಪಿರುವರು. ಹೀಗಾದ ಮೇಲೆ, ಆಯಾ ಗ್ರಂಥಗಳ ರಚನೆಯಲ್ಲಿ ಅವರವರ ಆಶಯವು ಇದ್ದೇ ಇರುತ್ತದೆ. ಅಂದರೆ, ಇಬ್ಬರು ಆಚಾರ್ಯರಿಗೂ ಯಾವುದೊ ಒಂದು ಅಭಿಪ್ರಾಯವೇ ಇಂತಹ ಗ್ರಂಥಗಳ ರಚನೆಗೆ ಪ್ರೇರಕವಾಗಿರುತ್ತದೆ.

ಶ್ರೀ ಶಂಕರರ ಬ್ರಹ್ಮಸೂತ್ರಭಾಷ್ಯದ ರಚನೆಗೆ ಪ್ರೇರಕ ಯಾವುದು? ಎಂಬ ಪ್ರಶ್ನೆಗೆ, ಅವರೇ ಉತ್ತರವನ್ನು ಕೊಟ್ಟಿರುತ್ತಾರೆ. ಈ ಭಾಗವನ್ನು **'ಅಧ್ಯಾಸ ಭಾಷ್ಯ'** ಎನ್ನುತ್ತಾರೆ. ಇದರಲ್ಲಿ 'ಬ್ರಹ್ಮವೊಂದೇ ಸತ್ಯ, ಉಳಿದವೆಲ್ಲವೂ ಮಿಥ್ಯೆಯೇ' ಎಂಬ ತತ್ತ್ವವನ್ನು ಯುಕ್ತಿಯಿಂದಲೇ ವಿಸ್ತಾರವಾಗಿ ಸ್ಥಾಪಿಸಿದ್ದಾರೆ. ಒಂದು ಶ್ರುತಿಯನ್ನೂ ಪ್ರಮಾಣವಾಗಿ ಅವರು ತೋರಿಸಿಲ್ಲ. ಕೊನೆಯಲ್ಲಿ 'ಹೀಗೆ ನಾನು ಸ್ಥಾಪಿಸಿದ ಅರ್ಥವನ್ನೇ ಉಪನಿಷತ್ತುಗಳೂ ಹೇಳುತ್ತವೆಯೆಂಬುದನ್ನು ನಾವು ಈ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ತೋರಿಸುತ್ತೇವೆ' ಎಂದೂ ಅವರು ಹೇಳುತ್ತಾರೆ. 'ಉಪನಿಷತ್ತುಗಳಲ್ಲಿ ಹೇಳಿದ್ದನ್ನೇ ನಾನು ಹೇಳುತ್ತೇನೆ' ಎಂದು ಹೇಳದೆ, 'ಯುಕ್ತಿಯಿಂದ ನಾನು ಸ್ಥಾಪಿಸಿದ್ದನ್ನೇ ಈ ಶಾಸ್ತ್ರವೂ ಹೇಳುತ್ತದೆ' ಎಂದು ಹೇಳುವ ಹಿನ್ನೆಲೆ ಏನು ಇರಬೇಕು?

ಇಷ್ಟು ಮಾತ್ರವಲ್ಲ; ಬ್ರಹ್ಮಸೂತ್ರಗಳನ್ನೇ ಇದಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬೇಕೆಂದೂ ಅವರು ಹೇಳಿರುವರು. ಬ್ರಹ್ಮಸೂತ್ರಗಳು ಸ್ಮೃತಿಗಳಾದ ಕಾರಣ ಅವುಗಳು ಶ್ರುತಿಗಳಂತಾಗುವಂತಿಲ್ಲವೆಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಬ್ರಹ್ಮಸೂತ್ರಗಳು ಸ್ಮೃತಿಗಳಲ್ಲ, ಆದರೆ ಶ್ರುತಿಗಳ ಅರ್ಥವನ್ನು

ನಿರ್ಣಯಿಸಿಕೊಡುವ ನ್ಯಾಯಗಳು. ನ್ಯಾಯಗಳನ್ನು ನಮ್ಮ ಇಷ್ಟ ಬಂದಂತೆ ವ್ಯಾಖ್ಯಾನಿಸಬಾರದು. ಈ ಸೂಕ್ಷ್ಮ ವಿಷಯ ಸರ್ವಜ್ಞರಾದ ಆಚಾರ್ಯರಿಗೆ ತಿಳಿಯದೇ ಇರಲು ಸಾಧ್ಯವಿಲ್ಲ. ಆದ್ದರಿಂದ ಹಾಗೆಲ್ಲ ಹೇಳುವ ಆಚಾರ್ಯರ ಹೃದಯಲ್ಲಿ ಏನೋ ಒಂದು ರಹಸ್ಯವಿರಲೇಬೇಕು.

ಶ್ರೀಶಂಕರರು ಮತ್ತು ಶ್ರೀರಾಮಾನುಜರಿಬ್ಬರೂ ಈ ರಹಸ್ಯವನ್ನರಿತಿದ್ದುದರಿಂದಲೇ 'ಸೂತ್ರಾಣಿ ಯಥಾಕಥಂಚಿತ್ ಯೋಜನೀಯಾನಿ' 'ಸೂತ್ರಾಕ್ಷರಾಣಿ ವ್ಯಾಖ್ಯಾಸಂತೇ' ಎಂಬ ವಿನ್ಯಾಸದ ವೈಚಿತ್ರ್ಯ ಬಂದಿದ್ದಾಗಿದೆ. ಮೊದಲನೆಯದು ಕಾಲದ ಪ್ರಭಾವ, ಎರಡನೆಯದು ವಸ್ತುಸ್ಥಿತಿಯಾದ್ದರಿಂದ ಎರಡೂ ಅನಿವಾರ್ಯವೇ ಆಗಿದೆ. ಅಂದರೆ, ಶ್ರೀಶಂಕರರ ಕಾಲದಲ್ಲಿ ರಾಮಾನುಜರು ಹುಟ್ಟಿದ್ದರೆ, ಶ್ರೀಶಂಕರರ ಕೆಲಸವನ್ನೇ ಶ್ರೀರಾಮಾನುಜರೂ ಮಾಡುತ್ತಿದ್ದರು. ಹಾಗೆಯೇ ಶ್ರೀರಾಮಾನುಜರ ಕಾಲದಲ್ಲಿ ಶ್ರೀಶಂಕರರು ಹುಟ್ಟಿದ್ದರೆ, ಶ್ರೀರಾಮಾನುಜರು ಮಾಡಿದ್ದನ್ನೇ ಶ್ರೀಶಂಕರರೂ ಮಾಡುತ್ತಿದ್ದರು; ಇದರಲ್ಲಿ ಸಂಶಯವಿಲ್ಲ.

೪೦ ವರ್ಷಗಳ ಹಿಂದೆ, ಮೈಸೂರಿನ ಶ್ರೀ ಪರಕಾಲಮಠಾಧೀಶರಾಗಿ, ಸರ್ವಸಮ್ಮತ ಮಹಾವಿದ್ವಾಂಸರಾಗಿ, ನಿರ್ಮತ್ಸರರೂ, ಮಹಾವಿಮರ್ಶಕರೂ ಆಗಿದ್ದ **ಶ್ರೀಶ್ರೀ ರಂಗನಾಥಬ್ರಹ್ಮತಂತ್ರ ಪರಕಾಲ ಮಹಾಸ್ವಾಮಿಗಳು**, ಅನೇಕ ಸಲ ವಿದ್ವತ್‌ಸಭೆಯ ಮಧ್ಯದಲ್ಲೇ, 'ಶ್ರೀರಾಮಾನುಜರು ಮಾತ್ರವೇ ಅವತಾರ ಪುರುಷರು, ಶ್ರೀಶಂಕರರಲ್ಲವೆಂಬ ವಾದವನ್ನು ನಾನು ಒಪ್ಪುವುದಿಲ್ಲ. ಆದರೆ, ಶ್ರೀಶಂಕರರ ಕಾಲದಲ್ಲಿ ಬೌದ್ಧರ ಪ್ರಭಾವ ಬಹಳ ಹೆಚ್ಚಾಗಿದ್ದುದರಿಂದ, ಕೆಲವು ವಿಷಯಗಳನ್ನು ನೇರವಾಗಿ ಹೇಳಲು ಅವರಿಗೆ ಸಾಧ್ಯವಾಗಲಿಲ್ಲ. ಸರಿಯಾಗಿ ನೋಡಿದರೆ, ಬ್ರಹ್ಮ ಸವಿಶೇಷವೆ? ನಿರ್ವಿಶೇಷವೇ? ಎಂಬುದರಲ್ಲೇ ವಿಚಾರವು ಎದ್ದು ಕಾಣುವುದಾಗಿದೆ. ವಾಸ್ತವವಾಗಿ ಪರಿಶೀಲಿಸಿದರೆ, ಅವರು ಪರಮವೈದಿಕರೇ ಆಗಿದ್ದರಿಂದ ಆಂತರಂಗದಲ್ಲಿ 'ಬ್ರಹ್ಮ ಸವಿಶೇಷವೇ' ಎಂಬ ಅಭಿಪ್ರಾಯವಿತ್ತೆಂಬುದು ಸ್ಪಷ್ಟವಾಗುವುದು' ಎಂದು ಹೇಳುತ್ತಿದ್ದರು. ಶ್ರೀಶಂಕರರ ಸ್ತೋತ್ರಸಾಹಿತ್ಯದಲ್ಲಿ ಈ ಅಂಶ ಸ್ಪಷ್ಟವಾಗಿದೆ. 'ಆ ಸ್ತೋತ್ರಗಳು ಮಂದಾಧಿಕಾರಿಗಳಿಗಾಗಿ, ಉತ್ತಮಾಧಿಕಾರಿಗಳಿಗಾಗಿಯಲ್ಲ' ಎಂಬ ವಾದವೇ 'ಅವರು ಪ್ರಚ್ಛನ್ನ ಬೌದ್ಧರು' ಎಂಬ ಅಪವಾದಕ್ಕೆ ಕಾರಣವಾಯಿತು. 'ನಾವು ಪ್ರಚ್ಛನ್ನ ಬೌದ್ಧರಲ್ಲ; ಬೌದ್ಧರೇ ಪ್ರಚ್ಛನ್ನ ವೈದಿಕರು' ಎಂಬ ಅವರ ಸಮಾಧಾನವೂ ಸಹ ಆ ಅಪವಾದವನ್ನೇ ದೃಢಪಡಿಸುವುದೇ ಹೊರತು, ನಿರಾಕರಿಸುವುದಿಲ್ಲ.

ವಾಸ್ತವವಾಗಿ ಹೇಳುವುದಾದರೆ, ಜ್ಞಾನಿಗಳಲ್ಲೇ ತಾರತಮ್ಯವು ಅನಿವಾರ್ಯವಾಗಿರುವುದರಿಂದ, ಉಳಿದವರೆಲ್ಲರೂ ಮಂದಾಧಿಕಾರಿಗಳೇ. ಪುಸ್ತಕದ ಪಾಂಡಿತ್ಯವನ್ನು ಗಳಿಸಿದ ಮಾತ್ರಕ್ಕೆ ಅವನು ಈ ಗಹನವಾದ ಅಧ್ಯಾತ್ಮಶಾಸ್ತ್ರದಲ್ಲಿ ಏನು ಮಾಡಬಲ್ಲ? **'ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ'** (ತಿಳಿದವರು ಹೇಳಿದರೆ ಮಾತ್ರ ಈ ಅಧ್ಯಾತ್ಮವನ್ನು ತಿಳಿಯಲು ಸಾಧ್ಯ. ಬೇರೆ ಗತಿಯೇ ಇಲ್ಲ) ಎಂದಿರುವಾಗ,

ಕೇವಲ ಪುಸ್ತಕ ಪಂಡಿತ ಏನು ಮಾಡಬಲ್ಲ? ಜ್ಞಾನಿಗಳಿಗೆ ಯಾವ ಪುಸ್ತಕದ ಅವಶ್ಯಕತೆಯೂ ಇರುವುದಿಲ್ಲ. ಆದ್ದರಿಂದ ಶ್ರೀಶಂಕರಾಚಾರ್ಯರ ಗ್ರಂಥಗಳ ಹಿನ್ನೆಲೆ ಗೊತ್ತಾಗದೆ, ಅವುಗಳ ಅಂತರಂಗದ ಉದ್ದೇಶವನ್ನು ತಿಳಿಯಲು ಸಾಧ್ಯವೇ ಇಲ್ಲ.

ಶ್ರೀಶಂಕರಾಚಾರ್ಯರು

ಈ ವಿಷಯಗಳು ನಿರ್ಧಾರವಾಗಬೇಕಾದರೆ ಶ್ರೀಶಂಕರಾಚಾರ್ಯರ ಚರಿತ್ರೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಆದರೆ, ಅವರ ಚರಿತ್ರೆ ಯಾವುದೂ ಪ್ರಾಮಾಣಿಕವಾಗಿ ಸಿಕ್ಕುವುದೇ ಇಲ್ಲ. 'ವೇದ ವಿರೋಧಿಗಳಾದ ಬೌದ್ಧ-ಜೈನರಿಂದ ವೈದಿಕಸಂಸ್ಕೃತಿಯನ್ನು ರಕ್ಷಿಸಿ, ವೈದಿಕ ಸಂಸ್ಕೃತಿಗೆ ಒಂದು ತಿರುವನ್ನೇ ಅವರು ಕೊಟ್ಟರು' ಎಂಬ ಕೀರ್ತಿಗೆ ಪಾತ್ರರಾದ ಶ್ರೀಶಂಕರರು, ಕೇವಲ ಯುಕ್ತಿವಾದದಿಂದ ಸಿದ್ಧವಾದದ್ದನ್ನೇ ವೇದಗಳೂ ಹೇಳುತ್ತವೆಯೆಂದು ಹೇಳಬೇಕಾದರೆ, ಆ ಕಾಲದ ಸಾಮಾಜಿಕ ಮತ್ತು ರಾಜಕೀಯ ಚರಿತ್ರೆಯನ್ನು ನೋಡಬೇಕು.

ಶ್ರೀಶಂಕರರು ಕೇರಳದ ಕಾಲಟಿ ಕ್ಷೇತ್ರದಲ್ಲಿ ಹುಟ್ಟಿದರೆಂಬುದನ್ನು ಬಿಟ್ಟು, ಉಳಿದ ಯಾವ ವಿಷಯವೂ ಪ್ರಮಾಣದಿಂದ ಸಿದ್ಧಿಸುವುದೇ ಇಲ್ಲ. ಅವರ ಚರಿತ್ರೆಯನ್ನು ಹೇಳುವ ಗ್ರಂಥಗಳ ವಿಷಯಗಳೆಲ್ಲವೂ ಕೇವಲ ಕಲ್ಪನೆಗಳಿಂದೇ ವಿಮರ್ಶಕರು ಹೇಳುವರು. ಶ್ರೀರಾಮಾನುಜರು ಮತ್ತು ಆನಂದತೀರ್ಥರ ವಿಷಯಕ್ಕೆ ಆಧಾರವಾಗಿ ಶಾಸನ ಸಿಕ್ಕಿರುವಂತೆ, ಅಂತಹ ಮಹನೀಯರಿಗೆ ಒಂದು ಶಾಸನವೂ ದೊರಯದೇ ಇರಲು ಕಾರಣವೇನು? ಕ್ರೈಸ್ತ ಆನೇ ಶತಮಾನದ ಉತ್ತರಭಾಗದಿಂದ ಕ್ರೈಸ್ತ ೧೦ನೇ ಶತಮಾನದ ಪೂರ್ವಭಾಗದವರೆಗಿನ ಸುಮಾರು ೨ ಶತಕದ ಕಾಲವನ್ನು 'ಕತ್ತಲೆ ಯುಗ' (**'Dark period'**) ಎಂದು ವಿಮರ್ಶಕರು ಕರೆಯುತ್ತಾರೆ. ಅಂದರೆ, ಆ ಕಾಲದ ಚರಿತ್ರೆಯು ಸಮಗ್ರವಾಗಿ ಸರಿಯಾಗಿ ಸಿಕ್ಕುವುದಿಲ್ಲ. ಏಕೆಂದರೆ, ಆ ಕಾಲದಲ್ಲಿ ಭಾರತದೇಶದಲ್ಲಿ ವಿಶೇಷತಃ ದಕ್ಷಿಣಭಾರತದಲ್ಲಿ, ವೈದಿಕರಿಗೂ, ಅವೈದಿಕರಿಗೂ ಭಯಂಕರವಾದ ಘರ್ಷಣೆಗಳು ನಡೆದವು. ಇದರಂತೆಯೇ ಪಾಶ್ಚಾತ್ಯ ದೇಶದಲ್ಲಿ, ಹಳೆಯ ಸಂಪ್ರದಾಯವಾದಿಗಳಿಗೂ, ಹೊಸ ಕ್ರೈಸ್ತ ಸಂಪ್ರದಾಯದವರಿಗೂ ಭಯಂಕರವಾದ ಮಾರಾಮಾರಿಯೇ ಹಿಂದೆ ನಡೆದ ವಿಷಯ ಚರಿತ್ರೆ ಪ್ರಸಿದ್ಧವಾಗಿದೆ.

ಆರಂಭಕಾಲದಲ್ಲಿ ವಿಶಾಲಹೃದಯರಾದ ವೈದಿಕರ ತೆಕ್ಕೆಯಲ್ಲೇ ಬೆಳೆದ ಬೌದ್ಧ - ಜೈನ ಧರ್ಮಗಳು, ಕಾಲಕ್ರಮದಲ್ಲಿ ವೇದವಿರುದ್ಧವಾಗಿ ಪರಿಣಮಿಸಿ, ಪರಸ್ಪರ ಘರ್ಷಣೆಯನ್ನು ಪ್ರಾರಂಭಿಸಿತು. ಕ್ರಮವಾಗಿ ಈ ಘರ್ಷಣೆ ಪರಸ್ಪರ ಮಾರಕವಾಗಿಯೂ ಪರಿಣಮಿಸಿತು. ಆರಂಭದಲ್ಲಿ ಅನೇಕ ವೈದಿಕರು ಬಲಿಯಾದರು. ಆ ಸಮಯಲ್ಲೇ ೬೩ ಶೈವಪುರಾತನರು, ೧೨ ವೈಷ್ಣವ ಸಂತರೂ ಅವತರಿಸಿ, ಜನಸಮುದಾಯದಲ್ಲಿ ದೈವಭಕ್ತಿಯನ್ನು ಅತಿ ಗಾಢವಾಗಿ ಬೆಳಸಿದರು. ಆದರೂ, ಅನೇಕ ವಿಧ

ಮಣಿ-ಮಂತ್ರ-ಓಷಧಾದಿ ಸಿದ್ಧಿಗಳಿಂದ ಬೌದ್ಧರು ಮತ್ತು ಜೈನರು ರಾಜಾಧಿರಾಜರನ್ನು ತಮ್ಮ ವಶದಲ್ಲಿಟ್ಟುಕ್ಕೊಂಡು, ಅವರ ಮೂಲಕ, 'ವೈದಿಕರು ಧರ್ಮವಿರೋಧಿ'ಗಳೆಂದು ಘೋಷಿಸಿ ಶೂಲಾರೋಪಣಾದಿಗಳಿಂದ ಕೊಲ್ಲಿಸುತ್ತಿದ್ದ ವಿಷಯ ಶಾಸನಸಿದ್ಧವಾಗಿದೆ.

ಅಧ್ಯಾಸ ಭಾಷ್ಯ

ಈ ಇಕ್ಕಟ್ಟಾದ ಸನ್ನಿವೇಶದಲ್ಲೇ ಶ್ರೀಶಂಕರರು ಅವತರಿಸಿದ್ದರಿಂದ, ಅವರು ಬಹಿರಂಗವಾಗಿ ಅವೈದಿಕರ ವಿರೋಧವನ್ನು ಪ್ರತಿಪಾದಿಸಿದ್ದರೆ, ಅವೈದಿಕರಾದ ಬೌದ್ಧ ಜೈನ ವಿದ್ವಾಂಸರು, ತಮ್ಮ ವಶದಲ್ಲಿದ್ದ ರಾಜರಿಂದ ಶ್ರೀಶಂಕರರ ಹತ್ಯೆಯನ್ನು ಮಾಡಿಸುವ ಸಂಭವವಿತ್ತೆಂದು ಆ ಕಾಲದ ಸ್ಥಿತಿಯಿಂದ ಗೊತ್ತಾಗುತ್ತದೆ. ಶ್ರೀಶಂಕರರು ರಾಜರ ಆಶ್ರಯವನ್ನು ಪಡೆಯುವ ಸಂಭವವಿಲ್ಲದ್ದರಿಂದ ಅವರು ಬಹಿರಂಗವಾಗಿ ತಮ್ಮ ಕಾರ್ಯವನ್ನು ಪ್ರಾರಂಭಿಸಲೇ ಇಲ್ಲ. ದಿವ್ಯಶಕ್ತಿಸಂಪನ್ನರಾದ ಅವರು ಆ ದಿವ್ಯಶಕ್ತಿಯ ಪ್ರೇರಣೆಯಂತೆ ಬೌದ್ಧ-ಜೈನ ವಿಹಾರಗಳಿಗೆ ಹೋಗಿ, ದೈವಬಲ, ತಪೋಬಲ ತಮ್ಮ ಅದ್ಭುತ ವಿಮರ್ಶನಾಚಾತುರ್ಯದಿಂದ ಅವರ ಮನಸ್ಸನ್ನು ಬದಲಾಯಿಸಲು ಪ್ರಾರಂಭಿಸಿದರು. ಜೀವಾತ್ಮರನ್ನು ಮಾತ್ರ ಒಪ್ಪಿ ಈಶ್ವರನನ್ನು ನಿರಾಕರಿಸುತ್ತಿದ್ದ ಅವರನ್ನು, 'ಇದಕ್ಕಿಂತಲೂ ಈಶ್ವರನನ್ನು ಒಪ್ಪಿ ಜೀವರನ್ನು ನಿರಾಕರಿಸುವುದು ಉಚಿತವಲ್ಲವೆ'! ಎಂದು ಪ್ರತಿಪಾದಿಸಿದ್ದರಿಂದ, ಆತ್ಮತತ್ತ್ವ ಒಂದೇಯಾದ್ದರಿಂದಲೂ, ಶೂನ್ಯಾದ್ವೈತ ಅಥವಾ ವಿಜ್ಞಾನಾದ್ವೈತ ವಾದಕ್ಕೆ ಹೋಲುವುದರಿಂದಲೂ ಇದನ್ನು ಆ ಅವೈದಿಕರು ಸುಲಭವಾಗಿ ಒಪ್ಪುವಂತೆ ಮಾಡಿದರು. ಇದಲ್ಲದೆ, ಅಷ್ಟರಲ್ಲೇ, ಶೈವ-ವೈಷ್ಣವ ಸಂತರ ದಿವ್ಯಗಾನಗಳಿಂದ ಸಾಮಾನ್ಯ ಜನರಲ್ಲಿ ಈಶ್ವರಭಕ್ತಿ ಬೆಳೆದಿತ್ತಾದ್ದರಿಂದ ಬೌದ್ಧ-ಜೈನ ಪಂಡಿತರನೇಕರು ಕ್ರಮವಾಗಿ ಬದಲಾದರು. 'ವೈದಿಕರು 'ಭೋಕ್ತಾ-ಭೋಗ್ಯ-ಈಶ್ವರ' ಎಂಬ ತ್ರಿತತ್ತ್ವವಾದಿಗಳು. ನಾವಂತು ನಿಮ್ಮಂತೆ ನಾವು ಏಕತತ್ತ್ವವಾದಿಗಳೇ' ಇತ್ಯಾದಿಯಾಗಿ ಅವರು ಅವೈದಿಕರನ್ನು ಒಲಿಸುವ ಸಲುವಾಗಿ ಪ್ರತಿಪಾದಿಸಿದರು. **'ಅಸ್ತು ತರ್ಹಿ ಕ್ಷಣಿಕವಿಜ್ಞಾನೇ ಗೌರವಾನ್ನಿತ್ಯವಿಜ್ಞಾನಮೇವಾತ್ಮಾ'** **'ತೇಷಾಮಲ್ಪಾಪರಾಧಂ ತು ದರ್ಶನಂ ನಿತ್ಯತೋಕ್ತಿತಃ'** ಇತ್ಯಾದಿಗಳಲ್ಲಿ ಇದರ ಪ್ರಭಾವವನ್ನು ನೋಡಬಹುದು. ಈ ವಿಷಯಗಳನ್ನು 'ತತ್ತ್ವಮುಕ್ತಾಕಲಾಪ' ಎಂಬ ಗ್ರಂಥದ 'ಸರ್ವದರ್ಶನ' ಎಂಬ ವ್ಯಾಖ್ಯಾನದ ಪೀಠಿಕೆಯಾದ 'ಸತ್ಯಾನ್ವೇಷಣೆ'ಯಲ್ಲಿ ಪ್ರತಿಪಾದಿಸಲಾಗಿದೆ.

ಬೌದ್ಧರು ಕೇವಲ ಯುಕ್ತಿವಾದಿಗಳಾದ ಕಾರಣ, ಅಧ್ಯಾಸಭಾಷ್ಯದಲ್ಲೂ ಒಂದು ಶ್ರುತಿಯನ್ನೂ ಉದಾಹರಿಸದೇ, ಕೇವಲ ಯುಕ್ತಿವಾದವನ್ನೇ ಅವರು ಹೂಡಿದರು. ಇಲ್ಲದಿದ್ದಲ್ಲಿ ವೇದವಿರೋಧಿಗಳಾದ ಬೌದ್ಧ-ಜೈನರ ಅಭಿಮುಖ್ಯವನ್ನು ನಿರೀಕ್ಷಿಸಲಾಗದು. ಅವರಿಗೆ ನೇರೆದುರಾಗಿ ತತ್ತ್ವವನ್ನು ಪ್ರತಿಪಾದಿಸಿದ್ದರೆ, ಖಂಡಿತವಾಗಿ ಶ್ರೀಶಂಕರರ ಹತ್ಯೆಯೇ ಆಗುತ್ತಿತ್ತೆಂಬುದರಲ್ಲಿ ಸಂದೇಹವೇ ಇಲ್ಲ ಎಂಬುದು ಆ ಕಾಲದ ದಕ್ಷಿಣದೇಶದ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಮನದಟ್ಟಾಗುವುದು. ಹೀಗೆ ಪರಮ

ವೈದಿಕರಾದ ಶ್ರೀಶಂಕರರು, ತನ್ನ ನಿಜ ಅಭಿಪ್ರಾಯವನ್ನು ಸೂಚಿಸಿದರೂ, ವಾದಗ್ರಂಥಗಳಲ್ಲಿ ತನ್ನ ನಿಜಸ್ವರೂಪವನ್ನು ಪ್ರಕಾಶಪಡಿಸದೇ, ಚಾಣಾಕ್ಷತೆಯಿಂದ ವರ್ತಿಸಿ ವೈದಿಕ ಸಂಸ್ಕೃತಿಗೆ ಒಂದು ತಿರುವನ್ನು (**Turning-point**) ಕೊಟ್ಟಿದ್ದರಿಂದಲೇ ಭಾರತದೇಶದ ಸಂಸ್ಕೃತಿಯು ಉಳಿಯಿತು. ಇದು ಮುಂದೆ ಬಂದವರಿಗೆ ಎಷ್ಟು ಅನುಕೂಲವಾಯಿತೆಂಬುದು ಚರಿತ್ರೆಯಿಂದ ಸಿದ್ಧವಿಷಯವಾಗಿದೆ. ಶ್ರೀಶಂಕರರು ರಾಜಾಶ್ರಯವನ್ನು ಪಡೆಯದೇ ಬಹಿರಂಗವಾಗಿ (**public**) ಬರದೆ ಹೋದದ್ದರಿಂದಲೇ ಅವರ ವಿಷಯದಲ್ಲಿ ಒಂದು ಶಾಸನವೂ ಬರಲು ಅವಕಾಶವಾಗಲಿಲ್ಲ.

ವೇದವಿರೋಧಿಗಳೂ, ನಿರೀಶ್ವರವಾದಿಗಳೂ ಆಗಿದ್ದ ಜೈನ-ಬೌದ್ಧರು ಅನೇಕ ಸಿದ್ಧಿಗಳಿಂದ ಕೂಡಿದ್ದು ರಾಜಾಧಿರಾಜರನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದ ವಿಷಯ ಶೈವ ಪುರಾತನರು ಮತ್ತು ವೈಷ್ಣವ ಆಳ್ವಾರುಗಳ ಚರಿತ್ರೆಯಲ್ಲೂ ಕಂಡುಬರುತ್ತದೆ. ವಿಶೇಷವಾಗಿ ೭ನೇ ಶತಮಾನದ ಉತ್ತರ ಭಾಗದಲ್ಲಿ ಶ್ರೀ ಜ್ಞಾನಸಂಬಂಧ ಸ್ವಾಮಿಗಳು ದೇವರ ಆಜ್ಞೆಯಿಂದ ಜನಸಾಮಾನ್ಯರಲ್ಲಿ ಭಕ್ತಿಮಾರ್ಗವನ್ನು ರೂಢಿಗೊಳಿಸಿದ ವಿಷಯವನ್ನು ಶ್ರೀಮದಾಚಾರ್ಯರೇ ಸೌಂದರ್ಯಲಹರಿಯಲ್ಲಿ (ಶ್ಲೋ.೭೫) ಬಣ್ಣಿಸಿದ್ದಾರೆ. ಹೀಗೆ ಶೈವ-ವೈಷ್ಣವರಿಗೂ, ಜೈನ-ಬೌದ್ಧರಿಗೂ ಸೌಹಾರ್ದವು ಶ್ರೀಜ್ಞಾನಸಂಬಂಧ ಸ್ವಾಮಿಗಳಿಂದ ಉಂಟಾಯಿತು. ಸಾಮಾನ್ಯ ಜನರು ಅಥವಾ ಸಮಾಜವು ಸುಧಾರಿಸಿತಾದರೂ ಕಟ್ಟಾ ಪಂಡಿತರ ಮಟ್ಟದಲ್ಲಿ ಘರ್ಷಣೆ ಶಾಂತವಾಗಲಿಲ್ಲ. ಇದು ಶ್ರೀಶಂಕರಾಚಾರ್ಯರ ಸಾಹಸದಿಂದಲೇ ಸ್ವಲ್ಪ ಶಾಂತವಾಯಿತು.

ಶ್ರೀಶಂಕರಾಚಾರ್ಯರ ಕೊಡುಗೆ

ವೈದಿಕರಿಗೂ ಮತ್ತು ವೇದಬಾಹ್ಯರಿಗೂ ಇದ್ದ ಅಂತರಾಳವನ್ನು ಕಡಿಮೆ ಮಾಡಲು ಶ್ರೀ ಆಚಾರ್ಯರು ಬಹುವಾಗಿ ಪ್ರಯತ್ನಿಸಿದರು. ವೈಭಾಷಿಕರು, ಸೌತ್ರಾಂತಿಕರು, ಯೋಗಾಚಾರರು, ಮಾಧ್ಯಮಿಕರು ಎಂದು ಬೌದ್ಧರು ನಾಲ್ಕು ವಿಧವಿರುವರು. ಮೊದಲೆರಡು ಪಂಗಡ ತಂತ್ರ ಪ್ರಧಾನ, ಕೊನೆಯ ಎರಡು ಪಂಗಡ ಜ್ಞಾನ ಪ್ರಧಾನ. ಜ್ಞಾನವೇ ಜೀವನದ ಪರಮಗುರಿಯಾದ್ದರಿಂದ ಯೋಗಾಚಾರ ಮತ್ತು ಮಾಧ್ಯಮಿಕರು **ಮಹಾಯಾನ**ದವರೆಂದು ಪ್ರಸಿದ್ಧರಾದರು. ವೈಭಾಷಿಕ ಮತ್ತು ಸೌತ್ರಾಂತಿಕರು ತಂತ್ರ ಪ್ರಧಾನರಾದ ಕಾರಣ **ಹೀನಯಾನ**ದವರೆಂದೆನಿಸಿಕೊಂಡವರು. ಇದು ನಮ್ಮ ಆಚಾರ ಪ್ರಧಾನರಾದ ವೈದಿಕರು ಮತ್ತು ಜ್ಞಾನಪ್ರಧಾನರಾದ ಪಂಡಿತರ ವಿಭಾಗದಂತೆ ಎಂದು ಭಾವಿಸಬಹುದು. **ನಾಲ್ಕು ವಿಧ ಬೌದ್ಧರೆಲ್ಲರೂ ನಿರ್ವಿಶೇಷವಾದಿಗಳೇ ಆಗಿರುವರು.** ಶ್ರೀಶಂಕರರು ಪ್ರಬಲರಾದ ಮಹಾಯಾನದ ಪಕ್ಷದೊಂದಿಗೆ ವೇದಾಂತಿಗಳ ಸಂಧಾನಕ್ಕಾಗಿ ತಮ್ಮ ಅಪೂರ್ವ ಪ್ರತಿಭೆ ಮತ್ತು ಪಾಂಡಿತ್ಯದಿಂದ, 'ವೇದಾಂತಪ್ರತಿಪಾದ್ಯವಾದ ಬ್ರಹ್ಮವು ನಿರ್ವಿಶೇಷವೇ' ಎಂದು ಪ್ರತಿಪಾದಿಸಿದರು. ಭಕ್ತಿಮಾರ್ಗವು ಪೂಜಾಪುರಸ್ಕಾರಾದಿಗಳಿಂದ ಕೂಡಿರುವುದರಿಂದ ಅದು ಹೀನಯಾನಕ್ಕೆ ಸಮಾನವಾದದ್ದು.

ಜ್ಞಾನಮಾರ್ಗವಂತು ಮಹಾಯಾನ ಸದೃಶ. ಹೀಗೆ ಅವರು ಪ್ರತಿಪಾದಿಸಿದ್ದರಿಂದ ಬೌದ್ಧರು ಸ್ವಲ್ಪಮಟ್ಟಿಗೆ ಸಮಾಧಾನಗೊಂಡರು.

ಈ ಸಂಧಿಕಾಲದಲ್ಲಿ ಬ್ರಹ್ಮಸೂತ್ರಭಾಷ್ಯದ ರಚನೆಯಾದ್ದರಿಂದಲೇ 'ಅಧ್ಯಾಸಭಾಷ್ಯ'ದ ಆವಶ್ಯಕತೆ ಅನಿವಾರ್ಯವಾಯಿತು. ಆದ್ದರಿಂದಲೇ ಅದರಲ್ಲಿ ಒಂದು ಶ್ರುತಿಯನ್ನೂ ಪ್ರಮಾಣಿಸಲಿಲ್ಲ.

ಈ ದೃಷ್ಟಿಯಿಂದಲೇ, ಶ್ರೀಶಂಕರರಿಗೆ ಸ್ವಲ್ಪವೇ ಸಮನಂತರ ಕಾಲದಲ್ಲಿ ಬಂದ ಪರಮ ವೈದಿಕರಾದ ಭಾಸ್ಕರಾಚಾರ್ಯರು, ಶ್ರೀಶಂಕರರ ಅಂತರಂಗದ ಅಭಿಪ್ರಾಯವು ಗೊತ್ತಾಗದ ಕಾರಣ ಅವರ ಪಕ್ಷವನ್ನು 'ಮಾಹಾಯಾನಿಕ' ಎಂದೇ ಹೇಳಿರುವರು. ಇದನ್ನು ಭಾಸ್ಕರಭಾಷ್ಯದ ಪೀಠಿಕೆಯಲ್ಲೇ ನೋಡಬಹುದು. ಆದರೆ, ಶ್ರೀಶಂಕರರ ಶಿಷ್ಯರು ಪೂರ್ವವಾಸನೆಯಿಂದ ಭಾಸ್ಕರರ ವಾದವನ್ನು ಸಹಿಸದೆ, ಬೌದ್ಧರ ಕಡೆಗೇ ಹೆಚ್ಚಾಗಿ ವಾಲಿದಂತೆ ಆದರು. ಈ ಸಮಯದಲ್ಲೇ 'ನೈಷ್ಕರ್ಮ್ಯಸಿದ್ಧಿ' ಮುಂತಾದ ಗ್ರಂಥಗಳ ರಚನೆಯಾಯಿತು. ಇದನ್ನೆಲ್ಲಾ 'ಸರ್ವದರ್ಶನ' ವ್ಯಾಖ್ಯಾನದಲ್ಲಿ ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ.

ಬೌದ್ಧರ ಮತ್ತು ವೈದಿಕರ ಮಾರ್ಗಗಳ ಸ್ವರೂಪವನ್ನು ಕುರಿತು ಹೇಳಬೇಕಾದರೆ, ಒಂದು ದೊಡ್ಡ ಗ್ರಂಥವೇ ಆಗಬೇಕಾಗುತ್ತದೆ. ಸಾರವಾಗಿ ಹೇಳುವುದಾದರೆ, **'ಹಂತ! ಬ್ರಹ್ಮೋಪದೇಶೋಽಯಂ ಶ್ರದ್ಧಧಾನೇಷು ಶೋಭತೇ । ವಯಮಶ್ರದ್ಧಧಾನಾಃ ಸ್ಮಃ ಯೇ ಯುಕ್ತಿಂ ಪ್ರಾರ್ಥಯಾಮಹೇ'** ।। ಎಂಬುದೇ ಆಗಿದೆ. ಶ್ರದ್ಧಾಭಕ್ತ್ಯಾದಿಗಳು ವೈದಿಕರ ಪ್ರಾಣವಾದರೆ, ಬೌದ್ಧರಿಗೆ ತರ್ಕವೇ ಪ್ರಾಣವಾಗಿದೆ. ವೈದಿಕರಿಗೆ 'ತರ್ಕ' ಪ್ರಮಾಣಕ್ಕೆ ಸಹಕಾರಿಯೇ ಹೊರತು ಪ್ರಮಾಣವಲ್ಲ. ಬೌದ್ಧರಿಗೆ ತರ್ಕವೇ ಪರಮಪ್ರಮಾಣ. ಏಕೆಂದರೆ ಪ್ರತ್ಯಕ್ಷವೂ ಸಮಯದಲ್ಲಿ ಸುಳ್ಳಾಗುತ್ತದೆ. ತರ್ಕ ಹಾಗಲ್ಲ ಎಂಬುದು ಬೌದ್ಧರ ನಿಲುವು. ಐಂದ್ರಿಯಿಕವಿಷಯಗಳಲ್ಲಿ ತರ್ಕ ಸ್ವಲ್ಪ ಸಹಕರಿಸಬಹುದಾದರೂ ಅತೀಂದ್ರಿಯ ವಿಷಯಗಳಲ್ಲಿ ತರ್ಕ ನಿರ್ವೀರ್ಯವಾಗುತ್ತದೆ. ಆದ್ದರಿಂದಲೇ **'ತರ್ಕಾಪ್ರತಿಷ್ಠಾನಾತ್'** (ಬ್ರ.ಸೂ.೨-೧-೧೧) ಎಂದೇ ಘೋಷಿಸಬೇಕಾಯಿತು. ಆದ್ದರಿಂದ ಬ್ರಹ್ಮವು ವೇದೈಕಗಮ್ಯವೆಂಬುದೇ ವೈದಿಕರ ಎಲ್ಲರ ನಿಲುವಾಗಿದೆ. ಆ ಬ್ರಹ್ಮವನ್ನೂ ಎರಡು ಮಾಡಿಬಿಟ್ಟರೆ, ಯಾವುದು ಅದರಲ್ಲಿ ವೇದೈಕಗಮ್ಯ?

ವಸ್ತುಸ್ಥಿತಿ

ವಾಸ್ತವವಾಗಿ ನೋಡುವ ಪಕ್ಷದಲ್ಲಿ **'ತದ್ಧೇದಂ ತರ್ಹ್ಯವ್ಯಾಕೃತಮಾಸೀತ್, ತನ್ನಾಮರೂಪಾಭ್ಯಾಂ ವ್ಯಾಕ್ರಿಯತ'** (ಬೃ.ಉ.೩.೩-೪-೭) **'ಅಸದ್ವಾ ಇದಮಗ್ರ ಆಸೀತ್, ತತೋ ವೈ ಸದಜಾಯತ. ತದಾತ್ಮಾನಂ ಸ್ವಯಮಕುರುತ'** (ತೈ.ಆನಂದ.೭) **'ಸದೇವ ಸೌಮ್ಯೇದಮಗ್ರ ಆಸೀತ್ ಏಕಮೇವಾದ್ವಿತೀಯಂ..... ತದೈಕ್ಷತ ಬಹು ಸ್ಯಾಂ ಪ್ರಜಾಯೇಯ'** (ಛಾಂ.ಉ.೬-೨-೧) ಇತ್ಯಾದಿಗಳಲ್ಲಿ ನಿರ್ವಿಶೇಷ ಮತ್ತು ಸವಿಶೇಷ ಎಂಬ ಎರಡೂ ಒಂದೇ ತತ್ತ್ವವೇ ಎಂಬುದು ಸ್ಪಷ್ಟವಾಗಿದೆ. ಆಚಾರ್ಯರ ಭಾಷ್ಯವೂ **'ದ್ವಿರೂಪಂ**

ಹಿ ಬ್ರಹ್ಮಾವಗಮ್ಯತೇ' ಎಂದೇ ಇರುವುದು. ಅದು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ ಉತ್ತರವನ್ನು ವೇದದಿಂದಲೇ ಪಡೆಯಬೇಕೆ ಹೊರತು, ತರ್ಕದಿಂದಲ್ಲ. ಇದು ಬ್ರಹ್ಮಸೂತ್ರಗಳಲ್ಲಿ ಸ್ಪಷ್ಟವಾಗಿದೆ. ವಿಶೇಷವಾಗಿ ಎರಡನೆಯ ಅಧ್ಯಾಯದ ಮೊದಲನೆಯ ಪಾದ ಮತ್ತು **'ಕೃತ್ಸ್ನಪ್ರಸಕ್ತ್ಯಧಿಕರಣ'** (ಬ್ರ.ಸೂ.೨-೧-೨೬) ಇದಕ್ಕಾಗಿಯೇ ಬಂದಿದೆ ಎಂಬುದು ಸರ್ವಸಮ್ಮತವಾದ ವಿಷಯ. **'ನೈಷಾ ತರ್ಕೇಣ ಮತಿರಾಪನೇಯಾ'** (ಕಠ.೨-೯), **'ಅಣೇಯಾನ್ ಹ್ಯತರ್ಕ್ಯಮ್'** (ಕಠ.೨-೮) ಇತ್ಯಾದಿ ಶ್ರುತಿಗಳೂ ಇದನ್ನು ಹೇಳುತ್ತವೆ. ಬ್ರಹ್ಮಸೂತ್ರಗಳ ರಚನೆಯೇ ಇದಕ್ಕಾಗಿಯೆ ಆಗಿದೆ ಎಂಬುದೇ ಸತ್ಯಾಂಶ. **'ತರ್ಕಾಪ್ರತಿಷ್ಠಾನಾದಪಿ'** (ಬ್ರ.ಸೂ.೨-೧-೧೧) **'ಸರ್ವೋಪೇತಾ ಚ ತದ್ದರ್ಶನಾತ್'** **'ಸರ್ವಧರ್ಮೋಪಪತ್ತೇಶ್ಚ'** (ಬ್ರ.ಸೂ.೨-೧-೩೬, ೩೭) ಇತ್ಯಾದಿಗಳಲ್ಲಿ ಇದನ್ನು ನೋಡಬಹುದು. ಹೀಗಿರುವಾಗ ಬ್ರಹ್ಮಸೂತ್ರಗಳನ್ನೇ ಹೇಗಾದರೂ ಹೊಂದಿಸಿಕೊಳ್ಳಬೇಕೆಂಬ ವಾದ ಮೀಮಾಂಸಾಶಾಸ್ತ್ರಕ್ಕೆ ವಿರುದ್ಧವಾದುದು, ಮತ್ತು ಅನ್ಯೋನ್ಯಾಶ್ರಯದಲ್ಲಿ ಕೊನೆಗೊಳ್ಳುವುದು. ಮಹಾಮೇಧಾವಿಗಳಾದ ಶ್ರೀಶಂಕರಾಚಾರ್ಯರಿಗೆ ಇದು ಗೊತ್ತಾಗದಿರಲು ಸಾಧ್ಯವಿಲ್ಲ. ಮಧ್ವಸ್ಥರೆಲ್ಲರೂ 'ಬ್ರಹ್ಮಸೂತ್ರಗಳು ಈಗಿನ ಅದ್ವೈತಪಂಡಿತರ ನಿರ್ವಿಶೇಷವಾದಕ್ಕೆ ಅವಕಾಶ ಕೊಡುವುದೇ ಇಲ್ಲ'ವೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

'ಜನ್ಮಾದ್ಯಸ್ಯ ಯತಃ' ಇತ್ಯಾದಿಯಾಗಿ ಜಗತ್ಕಾರಣತ್ವವನ್ನೇ ಬ್ರಹ್ಮದ ಲಕ್ಷಣವಾಗಿ ಹೇಳಿರುವಾಗ, ಅದು ಬ್ರಹ್ಮದ ಲಕ್ಷಣವೇ ಅಲ್ಲವೆಂದು ವಾದಿಸುವುದೂ ಸಮಂಜಸದಂತೆ ಕಾಣುವುದಿಲ್ಲ. ಮುಂದೆ **'ಪರಮತಸ್ಸೇತೂನ್ಮಾನ'** (ಬ್ರ.ಸೂ.೩-೨-೨೧) ಇತ್ಯಾದಿಗಳಲ್ಲಿ 'ಇಲ್ಲಿಯವರೆಗೆ ಪ್ರತಿಪಾದಿತವಾದ ಜಗತ್ತಿಗೆ ಕಾರಣವಾದ ಬ್ರಹ್ಮಕ್ಕಿಂತಲೂ ಬೇರೆ ತತ್ತ್ವವಿರುವುದಿಲ್ಲ' ಎಂದು ಪ್ರತಿಪಾದಿಸಿರುವಾಗ ಬ್ರಹ್ಮವು ಎರಡು ವಿಧವೆಂದು ಹೇಳಲು ಔಚಿತ್ಯವಿರುವುದೇ ಇಲ್ಲ. **'ಯಚ್ಚೇಹಾಸ್ತಿ ಯಚ್ಚ ನಾಸ್ತಿ ಸರ್ವಂ ಸದಸ್ಮಿನ್ ಸಮಾಹಿತಂ'** (ಛಾಂ.ಉ.೮-೧-೩) ಎಂದಿರುವ ಬ್ರಹ್ಮವು ನಿರ್ವಿಶೇಷವಾಗಲು ಹೇಗೆ ಸಾಧ್ಯ? ಇವೆಲ್ಲವೂ ನಿರ್ವಿಶೇಷ ವಾದಿಗಳಾದ ಬೌದ್ಧರನ್ನು ಸಂತೈಸುವುದಕ್ಕಾಗಿಯೇ ಎಂಬುದು ಸ್ಪಷ್ಟ. ಪರಕಾಲ ಮಠಾದೀಶರಾಗಿದ್ದ ಸ್ವಾಮಿಗಳು 'ಗೂಢಾರ್ಥಸಂಗ್ರಹ'ವೆಂಬ ವಿಪುಲವಾದ ಶ್ರೀಭಾಷ್ಯವ್ಯಾಖ್ಯಾನದಲ್ಲಿ 'ಬ್ರಹ್ಮ ಎರಡು ವಿಧ' ಎಂಬ ವಾದಕ್ಕೆ ಅವಕಾಶವೇ ಇಲ್ಲವೆಂಬುದನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ.

ಶ್ರೀಶಂಕರರ ಧರ್ಮಸಂಕಟ

ಶ್ರೀಶಂಕರರ ಭಾಷ್ಯದಲ್ಲಿ ಅವಚ್ಛೇದವಾದ ಮತ್ತು ಪ್ರತಿಬಿಂಬವಾದಗಳಿಗೆ ಅವಕಾಶವಿರುವಂತೆಯೇ, ಸವಿಶೇಷ-ನಿರ್ವಿಶೇಷವಾದಗಳಿಗೂ ಅವಕಾಶವಿರುವುದನ್ನು ನೋಡಬಹುದು. ಮಹಾಜ್ಞಾನಿಗಳನ್ನು ಬಿಟ್ಟರೆ, ಎಂತಹ ವಿದ್ವಾಂಸರೇ ಆಗಲಿ ಪೂರ್ವಗ್ರಹವಿಲ್ಲದಿರಲು ಬಹಳ ಕಷ್ಟವಾದ ವಿಷಯ. ಜೈನ ಅಥವಾ ಬೌದ್ಧ ವಿದ್ವಾಂಸರುಗಳು ಸಹ ಹೊರದೇಶದವರಲ್ಲವಲ್ಲ! ಇಲ್ಲಿರುವ ಜನರೇ ಬೌದ್ಧರಾಗುತ್ತಾರೆ,

ಅಥವಾ ಜೈನರಾಗುತ್ತಾರೆ. ಸಮಯದಲ್ಲಿ ಮತ್ತೆ ತಮ್ಮ ಮೂಲ ವೈದಿಕ ಧರ್ಮಕ್ಕೆ ತಿರುಗುತ್ತಾರೆ. ಒಟ್ಟಿನಲ್ಲಿ **'ಕಾಲಾಯ ತಸ್ಮೈ ನಮಃ'**!

ಇಂತಹ ಸನ್ನಿವೇಶದಲ್ಲೇ **'ವೇದೋಽನೃತೋ ಬುದ್ಧಕೃದಾಗಮೋಽನೃತೋ ಪ್ರಾಮಾಣ್ಯಮೇತಸ್ಯ ಚ ತಸ್ಯ ಚಾನೃತಮ್ । ಬೋದ್ಧಾನೃತೋ ಬೋದ್ಧೃಫಲೇ ತಥಾನೃತೇ ಯೂಯಂ ಚ ಬೌದ್ಧಾಶ್ಚ ಸಮಾನಸಂಪದಃ'** ॥ ಎಂಬ ಯಾದವಪ್ರಕಾಶರ ಶ್ಲೋಕವೂ, **'ಸೂತ್ರಾಭಿಪ್ರಾಯಸಂವೃತ್ತ್ಯಾ ಸ್ವಾಭಿಪ್ರಾಯನಿವೇದನಾತ್ । ವ್ಯಾಖ್ಯಾತಂ ಯೈರಿದಂ ಶಾಸ್ತ್ರಂ ವ್ಯಾಖ್ಯೇಯಂ ತನ್ನಿವೃತ್ತಯೇ'** ॥ ಇತ್ಯಾದಿ ಭಾಸ್ಕರರ ಶ್ಲೋಕವೂ ಹುಟ್ಟಿಕೊಳ್ಳುವುದು ಸಹಜವೇ ಆಗಿದೆ.

'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬ ವಾದದಲ್ಲಿ, ಬ್ರಹ್ಮ ಭಿನ್ನವಾದ ವೇದವೂ, ಅದರ ಪ್ರಾಮಾಣ್ಯವೂ, ರಾಮಕೃಷ್ಣಾದ್ಯವತಾರಗಳೂ, ಭಗವದ್ಗೀತಾದಿ ಧರ್ಮಗ್ರಂಥಗಳೂ, ಎಲ್ಲಾ ತರಹದ ವೇದವಿಹಿತ ಕರ್ಮಗಳೂ ಎಲ್ಲವೂ ಸಂಪೂರ್ಣ ಮಿಥ್ಯೆಯೇ ಎಂದರೆ, ಯಾವ ಭಾರತೀಯನು ಸಹಿಸಿಯಾನು! ಕಟ್ಟಾ ಅದ್ವೈತಿಗಳಂತು ಈಗಲೂ 'ದ್ವೈತಿಗಳಿಗೆ ಭೇದವಾಸನೆ ದೃಢವಾಗಿರವುದರಿಂದ ಸತ್ಯ ಹೊಳೆಯುತ್ತಿಲ್ಲ. ಪೂರ್ಣಬ್ರಹ್ಮಜ್ಞಾನಿಯ ದೃಷ್ಟಿಯಿಂದಂತು ಎಲ್ಲವೂ ಮಿಥ್ಯೆಯೇ, ಸಂದೇಹವೇನು? ಬ್ರಹ್ಮ ಒಂದೇ ಸತ್ಯ' ಎಂದು ಘೋಷಿಸಿಯೇ ಘೋಷಿಸುತ್ತಾರೆ. ಆದ್ದರಿಂದ ಸತ್ಯವನ್ನರಿಯಲು ಮಧ್ಯಸ್ಥ ದೃಷ್ಟಿಯಿಂದ ವಿಷಯವನ್ನು ನಿರ್ಣಯಿಸಬೇಕಾದರೆ, ಮೊದಲು ನಾವು ಪೂರ್ವಮಾನಾಭಿಮಾನಗಳನ್ನು ಸ್ವಲ್ಪ ಹೊತ್ತಿಗಾದರೂ, ಒಂದು ಮೂಲೆಯಲ್ಲಿ ಬದಿಗಿಟ್ಟು, ಅಂತರ್ಯಾಮಿಯನ್ನು ಸಾಕ್ಷಿಯಾಗಿಟ್ಟು, ಶಾಂತವಾಗಿ ಚಿಂತಿಸಬೇಕು. ಉಳಿದ ವಿಷಯಗಳನ್ನು ಹಿಂದೆಯೇ ಹೇಳಿಯಾಗಿದೆ.

ಮೊದಲು 'ದ್ವೈತಿಗಳಿಗೆ ಭೇದವಾಸನೆಯೇ ಅಭೇದನಿಶ್ಚಯಕ್ಕೆ ಪ್ರತಿಬಂಧಕವಾಗಿದೆ' ಎಂಬ ವಾದವನ್ನು ನೋಡೋಣ. ಸೃಷ್ಟಿಯ ಪ್ರಾರಂಭದಿಂದಲೇ ಭೇದ ಅನುವೃತ್ತಿಯಾಗುತ್ತಿರುವುದರಿಂದ, ಭೇದವಾಸನೆ ದೃಢವಾಗಿರುವುದು ಸಹಜವೇ, ಹೌದು. ಆದರೆ ಅಭೇದದ ಅನುಭವ ಹಿಂದೆಂದೂ ಇಲ್ಲದಿದ್ದರೂ ಅಭೇದವಾಸನೆ ಬರಲು ಹೇಗೆ ಸಾಧ್ಯ? ಕೊನೆಯ ಗಳಿಗೆಯ ತನಕವೂ ಭೇದಾನುಭವ ಅನಿವಾರ್ಯವೇ ಅಲ್ಲವೆ? ಆದ್ದರಿಂದ ಭೇದವಾಸನೆಯೂ ಅನಿವಾರ್ಯವೆ ಆಗಿದೆ. ಅಭೇದವಾಸನೆ ಅದ್ವೈತಪಂಡಿತರಿಗೆ ಬರಲು ಹೇಗೆ ಸಾಧ್ಯ? ಶ್ರುತಿವಾಕ್ಯದಿಂದಲೊ; ಗುರೂಪದೇಶದಿಂದಲೂ ಬರುವ ಜ್ಞಾನ ಅತ್ಯಂತ ಪರೋಕ್ಷವಾಗುವುದರಿಂದ 'ಅಭೇದವಾಸನೆ' ಹುಟ್ಟಲು ಹೇಗೆ ಸಾಧ್ಯ? ವಾಸನೆಗೆ ಕಾರಣ ದೃಢವಾದ ಅನುಭವವಲ್ಲವೆ? ಅಂತಹ ಅನುಭವ ಈ ಲೋಕದಲ್ಲೇ ಎಂದೆಂದೂ ಸಾಧ್ಯವೇ ಇಲ್ಲ. ಆದ್ದರಿಂದ, ಎಂದೂ ಅಭೇದವಾಸನೆ ಬರಲೂ ಮತ್ತು ಪ್ರಬಲವಾಗಲೂ ಸಾಧ್ಯವೇ ಇಲ್ಲ.

ಸವಿಶೇಷಾದ್ವೈತಿಗಳಿಗೂ ಸಹ ಭೇದಾನುಭವ ಅನಾದಿಯಾಗಿರುವುದರಿಂದ ಕೊನೆಯಲ್ಲಾದರು ಅದ್ವೈತ ಹೇಗೆ ಸಾಧ್ಯ? ಎಂದರೆ, ಸವಿಶೇಷಾದ್ವೈತವನ್ನು ಪ್ರತಿಪಾದಿಸುವ ವೇದಾಂತಶಾಸ್ತ್ರದಲ್ಲಿ

'ಫಲಮತ ಉಪಪತ್ತೇಃ' (೩-೨-೩೨) **'ಹಾರ್ದಾನುಗೃಹೀತಃ'** (೪-೨-೧೧) ಎಂದು ಐಕ್ಯವು ಪರಮಾತ್ಮನ ಅನುಗ್ರಹದಿಂದಲೇ ಆಗುವುದೆಂಬುದೇ ವೈದಿಕರ ನಿಲುವಾಗಿದೆ. **'ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ'** (ಋಗ್ವೇದ, ೭-೫೯-೧೨; ತೈ.ಸಂ.೧-೮-೬) ಎಂಬಲ್ಲಿ ಹೇಳಿರುವಂತೆ ಐಕ್ಯವು ಕೊನೆಯಲ್ಲಿ ಸಹಜವಾಗಿ ಬರುವುದು. ಈವಾಗ ಅದರ ಚಿಂತೆಯ ಅಗತ್ಯವಿಲ್ಲ.

ಶ್ರುತಿಯೇ ಮಿಥ್ಯೆ ಎಂದರೆ, ವೈದಿಕರಿಗೆ ಅವನು ಪಾಷಂಡಿಯೇ ಆಗುವ ಕಾರಣ, ಅಸತ್ಯದಿಂದ ಸತ್ಯಸಿದ್ಧಿಯ ವಾದವೂ ತರ್ಕಮಾತ್ರವೇ ಆಗಬೇಕಾಗುತ್ತದೆ. ಅಭೇದವು ಪಾರಮಾರ್ಥಿಕವಾದರೂ ಅದು ತಾನಾಗಿಯೇ ಎಂದೋ ಒಂದು ದಿನ ಆಗಬಹುದೇ ಹೊರತು, ಅದು ಮಾನವನ ಬುದ್ಧಿ ಮತ್ತು ಪ್ರಯತ್ನಾದಿಗಳಿಂದ ಸಾಧ್ಯವೇ ಇಲ್ಲ. ಆದ್ದರಿಂದ ಅಭೇದಕ್ಕಾಗಿ ಸಾಧನೆಯೇ ಸಿದ್ಧಿಸುವಂತಿಲ್ಲ. ಈ ಗಹನವಾದ ಸತ್ಯ ದೃಷ್ಟಿಯಿಂದಲೇ ದಾರಿದೀಪವಾಗಿ **'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ । ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂಗೋಸ್ತ್ವಕರ್ಮಣಿ'** ।। ಎಂಬ ವಿಷಯ ಬಂದಿದೆ. ಸಾಧನೆಯಲ್ಲಿ ಭೇದವು ಅನಿವಾರ್ಯವಾಗುವುದರಿಂದ, ಭೇದಭಾವನೆಯಿಂದ ಅಹಂಕಾರವು ದೃಢವಾಗುವ ಕಾರಣ, ಸಾಧನೆಯಲ್ಲಿರುವ ಈ ರಹಸ್ಯವನ್ನರಿಯಬೇಕಾದರೆ, 'ಮಾ ಕರ್ಮಫಲಹೇತುರ್ಭೂಃ' ಎಂಬ ಒಗಟನ್ನು ಬಿಡಿಸಬೇಕಾಗುತ್ತದೆ. **'ನೀನು ನಿನ್ನ ಹಂತದಲ್ಲಿ ಪ್ರಾಮಾಣಿಕವಾಗಿರು, ಉಳಿದದ್ದನ್ನು ನಾನು ನೋಡಿಕೊಳ್ಳುವೆನು'** ಎಂಬುದೇ ದೈವದ ಸಂದೇಶ. ಕೇವಲ ಬುದ್ಧಿಯ ಬಲದಿಂದ ಏನನ್ನು ಸಾಧಿಸಲಾಗುವುದಿಲ್ಲವೆಂಬ ಕಹಿಯಾದ ಶುದ್ಧ ವೈದಿಕರ ಸತ್ಯವನ್ನೇ **'ಫಲಮತ ಉಪಪತ್ತೇಃ'** (೩-೨-೩೨) **'ಹಾರ್ದಾನುಗೃಹೀತಃ'** (೪-೨-೧೧) ಎಂಬ ಸೂತ್ರಗಳು ತಿಳಿಸುತ್ತವೆ. ವೈದಿಕ ಕರ್ಮಗಳು ಜ್ಞಾನಕ್ಕೆ ವಿರೋಧಿ ಎಂಬುದು ಶುಷ್ಕಬುದ್ಧಿಜೀವಿಗಳ ವಾದವೇ ಆಗಿದೆ. ಅವು ಜ್ಞಾನಕ್ಕೆ ವಿರೋಧಿಯಾದರೆ, ಚಿತ್ತಶುದ್ಧಿಯಾದರೂ ಆ ಕರ್ಮಗಳಿಂದ ಹೇಗೆ ಸಾಧ್ಯ? ಅಷ್ಟು ಮಾತ್ರವಲ್ಲ; ವರ್ಣಾಶ್ರಮಧರ್ಮಗಳೆಲ್ಲವೂ ವೈದಿಕವಾದ್ದರಿಂದ, ಅವೆಲ್ಲವೂ ಜ್ಞಾನಕ್ಕೆ ವಿರೋಧಿಯೇ ಆಗಬೇಕಾಗಿ ಬರುವುದರಿಂದ, ಸನಾತನ ಭಾರತದ ಆರ್ಯರ ಸಂಸ್ಕೃತಿಯೇ ಅರ್ಥಶೂನ್ಯವಾಗಬೇಕಾಗುತ್ತದೆ.

ಎಲ್ಲವೂ ವ್ಯವಹಾರದ ಅವಸ್ಥೆಗೆ ಸೇರುವುದರಿಂದ, ಅವು ಪಾರಮಾರ್ಥಿಕವಾಗಲು ಹೇಗೆ ಸಾಧ್ಯ? ಎಂದರೆ, ಈ ವಾದವು ಮೇಲೆ ಹೇಳಿದ ದೋಷವನ್ನೇ ಮತ್ತಷ್ಟು ದೃಢಗೊಳಿಸುತ್ತದೆ. ಏಕೆಂದರೆ ವ್ಯಾವಹಾರಿಕವೆಂದರೆ ಸುಳ್ಳೆಂದೇ ಅವರು ನಿರ್ಧರಿಸಿರುವರು. ಬ್ರಹ್ಮೋಪದೇಶವೂ ಸುಳ್ಳಾಗುತ್ತದೆ. ಪುಣ್ಯಪಾಪಾದಿಗಳೂ ಸುಳ್ಳಾಗುವುದರಿಂದ ಸ್ವೇಚ್ಛಾಚಾರದಲ್ಲೇ ಕೊನೆಗೊಳ್ಳಬೇಕಾಗುತ್ತದೆ. ಆದ್ದರಿಂದ ಜಗನ್ಮಿಥ್ಯಾತ್ವವಾದವು ಭಗವಂತನ ಸಕಲ ವಿಭೂತಿಗಳನ್ನು ನಿರಾಕರಿಸುವುದರಿಂದ ಅದು ವೈದಿಕರು ಒಪ್ಪುವಂತಹದ್ದೇ ಅಲ್ಲ. ವೈದಿಕ ಸಂಸ್ಕೃತಿಯನ್ನು ಉಳಿಸುವ ಸಲುವಾಗಿ ಬಂದವರಾದ ಆ ಆಚಾರ್ಯರ ಈ ವಾದವು, ವೇದವಿರೋಧಿಗಳಾದ ಜೈನ ಮತ್ತು ಬೌದ್ಧರನ್ನು ತೃಪ್ತಿಪಡಿಸುವುದಕ್ಕಾಗಿಯೇ ಎಂಬುದರಲ್ಲಿ ಎಳ್ಳಷ್ಟೂ ಸಂದೇಹವೇ ಇಲ್ಲ.

ಹೀಗೆ ಕಾಲಸನ್ನಿವೇಶಾದಿಗಳಿಂದ, ನಿರ್ವಿಶೇಷವಾದಿಗಳಾದ ಬೌದ್ಧರನ್ನು ತೃಪ್ತಿಪಡಿಸಲೇ, 'ಬ್ರಹ್ಮ ಎರಡು ವಿಧ' ಇತ್ಯಾದಿಗಳನ್ನು ಹೇಳಬೇಕಾದ ನಿರ್ಬಂಧವು ಆಚಾರ್ಯರಿಗೆ ಅನಿವಾರ್ಯವಾಯಿತು. ಬೌದ್ಧರು ಸ್ವಲಕ್ಷಣವಾದಿಗಳಾದ್ದರಿಂದ ನಿರ್ವಿಶೇಷವಾದಿಗಳೆಂಬುದು ಸರ್ವಸಮ್ಮತ. ಆಚಾರ್ಯರ ಅಂತರಂಗವನ್ನು ಅರಿಯಲಾರದೆ ಹೋದದ್ದರಿಂದಲೂ, ಪೂರ್ವವಾಸನೆ ಅತಿ ಪ್ರಬಲವಾದ್ದರಿಂದಲೂ ಅನಂತರ ಬಂದ ಪಂಡಿತರು ಮತ್ತೆ ಬೌದ್ಧರ ಮಾರ್ಗವನ್ನೇ ತುಳಿದದ್ದು ಶೋಚನೀಯವೇ ಸರಿ! ಈ ಅಂಶವನ್ನು, ಕಳೆದ ಶತಮಾನದ ಆದಿಯಲ್ಲಿದ್ದ, ದೊಡ್ಡ (ಮಹಾ) ಅದ್ವೈತ ವಿದ್ವಾಂಸರೂ, ಮಹಾಮಹೋಪಾಧ್ಯಾಯಾದಿ ಬರುದು ಸಂಪನ್ನರೂ ಆಗಿದ್ದ ತಿರುವಿಶನಲ್ಲೂರು ರಾಮಸುಬ್ರಹ್ಮಣ್ಯಶಾಸ್ತ್ರಿಗಳವರು **'ಅಣುಭಾಷ್ಯಗಾಂಭೀರ್ಯಮ್'** ಎಂಬ ತಮ್ಮ ಗ್ರಂಥದಲ್ಲಿ ಸ್ಥಾಪಿಸಿರುವುದನ್ನು ನೋಡಬಹುದು.

ಶ್ರೀಭಾಷ್ಯದ ಅವತಾರ

ಹೀಗೆ, ಶ್ರೀಶಂಕರಾಚಾರ್ಯರ ಉದ್ದೇಶವೇ ವಿಫಲವಾಗುವ ಸಂಭವ ಕಂಡುಬಂದಿದ್ದರಿಂದಲೇ ಭಗವದ್ರಾಮಾನುಜರು, ಯಥಾವತ್ತಾದ ಬ್ರಹ್ಮಸೂತ್ರಗಳ ಭಾವವನ್ನು ಪ್ರಕಾಶಪಡಿಸಬೇಕಾದ ನಿರ್ಬಂಧದಿಂದಲೇ, ಎರಡೇ ವಾಕ್ಯಗಳನ್ನು ತಮ್ಮ ಭಾಷ್ಯದ ಪೀಠಿಕೆಯಾಗಿ ಹೇಳಿದರು. ಶ್ರೀಶಂಕರಾಚಾರ್ಯರ ನಿರ್ವಿಶೇಷವಾದ, ಕಾಲಸನ್ನಿವೇಶಾದಿಗಳ ನಿರ್ಬಂಧ ಪ್ರಯುಕ್ತವೇ ಆಗಿದೆ. ಏಕೆಂದರೆ ಪ್ರಾಚೀನ ವೈದಿಕೋತ್ತಮರಾದ ಬೋಧಾಯನಾದಿಗಳ ಸಂಪ್ರದಾಯವೇ ಬ್ರಹ್ಮಸೂತ್ರಕಾರರಾದ ಬಾದರಾಯಣರಿಗೆ ಸಮ್ಮತವಾಗಿರಲು ಸಾಧ್ಯವೆ ಹೊರತು, ಮಧ್ಯಕಾಲದ ಶುಷ್ಕತಾರ್ಕಿಕರಾದ ಬೌದ್ಧರ ವಾದವೇ ಅವರಿಗೆ ಸಮ್ಮತವೆಂಬ ವಾದವು ಪರಮವೈದಿಕರಾದ ಶ್ರೀಶಂಕರರಿಗೆ ಸಮ್ಮತವಾಗಿಲು ಸಾಧ್ಯವೇ ಇಲ್ಲ ಎಂದು ಪ್ರದರ್ಶನ ಮಾಡುವುದೇ ಶ್ರೀರಾಮಾನುಜರ ಪರಮೋದ್ದೇಶವಾಗಿದೆ. ಶ್ರೀಶಂಕರರ ಹೆಸರನ್ನಾಗಲಿ, ಅವರ ಗ್ರಂಥದ ಹೆಸರನ್ನಾಗಲಿ, ಗ್ರಂಥಗಳ ಪಂಕ್ತಿಗಳ ಉದ್ಧಾರವನ್ನಾಗಲಿ ಎಲ್ಲೂ ಮಾಡಲೇ ಇಲ್ಲ. ಶ್ರೀಶಂಕರಭಾಷ್ಯದ ವ್ಯಾಖ್ಯಾನಕಾರರ ಮತವನ್ನೇ ಭಗವದ್ ರಾಮಾನುಜರು ವಿಮರ್ಶಿಸಿರುವರು. ನಿರ್ವಿಶೇಷವಾದ ವಸ್ತುವು ಯಾವುದೂ ಇರಲು ಸಾಧ್ಯವಿಲ್ಲದಿರುವಾಗ, ಸರ್ವಜಗತ್ತಿನ ಎಲ್ಲಾ ವಿಧ ಚಲನೆಗಳಿಗೂ ಕಾರಣವಾದ ಬ್ರಹ್ಮವು ನಿರ್ವಿಶೇಷವಾಗಿರಲು ಹೇಗೆ ಸಾಧ್ಯ? ಆ ವಿಶೇಷವು ಕೆಲಸಮಯ ಪ್ರತ್ಯೇಕವಾಗಿ ಎದ್ದು ಕಾಣಬಹುದು. ಕೆಲ ಸಮಯ ಹಾಗೆ ಕಾಣದೇ ಹೋಗಬಹುದು. ಇದಕ್ಕೆ ದೃಷ್ಟಾಂತವು ಆಲಮರದ ಬೀಜವೇ ಆಗಿದೆ.

ಜಗತ್ಕಾರಣ ಸವಿಶೇಷವೇ

ಛಾಂದೋಗ್ಯದ ಆರನೆಯ ಅಧ್ಯಾಯದ ಹನ್ನೆರಡನೆಯ ಖಂಡದಲ್ಲಿ ಒಂದು ಪ್ರತ್ಯಕ್ಷ ಪ್ರಯೋಗವನ್ನೇ ಕೊಡಲಾಗಿದೆ. ಆಚಾರ್ಯರು ಶಿಷ್ಯನಿಗೆ ಆಲ ಮರದ ಹಣ್ಣನ್ನು ತರಲು ಹೇಳಿ,

ಅದರೊಳಗೆ ಸಣ್ಣದಾಗಿರುವ ಬೀಜವನ್ನು ಉಪಾಯವಾಗಿ ಎರಡು ಭಾಗವಾಗಿ ಮಾಡಲು ಹೇಳುತ್ತಾರೆ. ಶಿಷ್ಯನು ಹಾಗೆಯೇ ಮಾಡಿದಾಗ, 'ಅದರೊಳಗೆ ಏನನ್ನು ನೋಡುತ್ತೀಯೆ'? ಎಂದು ಕೇಳಿದಾಗ 'ಏನನ್ನು ನೋಡುತ್ತಿಲ್ಲ' ಎಂದು ಶಿಷ್ಯನು ಉತ್ತರಕೊಡುತ್ತಾನೆ. ಆಚಾರ್ಯರು 'ನೋಡಿದೆಯೇ? ವಿಷಯವು ಎಷ್ಟು ಸೂಕ್ಷ್ಮ? ಬೀಜದೊಳಗೆ ಏನೂ ಇಲ್ಲದಿದ್ದರೆ, ಅದರಿಂದ ಈ ಬೃಹತ್ತಾದ ಆಲದ ಮರ ಹೇಗೆ ಹೊರಬರಲು ಸಾಧ್ಯ! ಬೀಜದೊಳಗೆ ಏನೂ ಇಲ್ಲದಿದ್ದರೆ, ಅಂತಹ ಒಂದು ಸಣ್ಣ ಕಲ್ಲಿನಿಂದಲೂ ಆ ಮರ ಹೊರಬಹಬಹುದಲ್ಲವೆ? ಅಷ್ಟು ಮಾತ್ರವಲ್ಲ; ಯಾವ ಬೀಜದಿಂದಲೂ ಯಾವ ಮರಬೇಕಾದರೂ ಬರಬಹುದಲ್ಲವೆ? ಆದ್ದರಿಂದ ಈ ಮಹಾನ್‌ವೃಕ್ಷ ಯಾವುದೋ ಒಂದು ರೀತಿಯಲ್ಲಿ ಬೀಜರೂಪದಲ್ಲಿ ಅತಿ ಸೂಕ್ಷ್ಮವಾಗಿರಲೇಬೇಕಲ್ಲವೆ? ವಿಷಯವು ಎಷ್ಟು ಸೂಕ್ಷ್ಮ ನೋಡು! ಪ್ರತ್ಯಕ್ಷವಾದ ಈ ಪ್ರಪಂಚದಲ್ಲೇ ಇಂತಹ ಸೂಕ್ಷ್ಮ ವಿಷಯವು ಅನುಭವ ಸಿದ್ಧವಾಗಿರುವಾಗ **'ಅಣೋರಣೀಯಾನ್'** ಎಂದು ಬಣ್ಣಿಸಲ್ಪಡುವ ಬ್ರಹ್ಮದ ಸೂಕ್ಷ್ಮತೆಯನ್ನು ಹೇಗೆ ಅರಿಯಲು ಸಾಧ್ಯ? ಎಂದು ಹೇಳಿ ಮುಗಿಸುತ್ತಾರೆ.

ಹೀಗೆ ಇಡೀ ವಿಶ್ವಕ್ಕೆ ಮೂಲಕಾರಣವಾದ ಬ್ರಹ್ಮದಲ್ಲಿರುವ ವಿಶೇಷವನ್ನು ಹೇಳಲು ಸಾಧ್ಯವಾಗದಿದ್ದರೂ, ಅದು ಸವಿಶೇಷವೇ. ಲೋಕದಲ್ಲೂ ಶಬ್ದದಿಂದ ಹೇಳಲು ಸಾಧ್ಯವಾಗದಿದ್ದಾಗ 'ವಿಶೇಷ' ಪದವನ್ನೇ ಎಲ್ಲರೂ ಉಪಯೋಗಿಸುವುದನ್ನು ನಾವು ನೋಡಬಹುದು. ಪ್ರಕೃತ ಬ್ರಹ್ಮದಲ್ಲಿರುವ ವಿಶೇಷವನ್ನು ಗುಣ-ವಿಗ್ರಹ-ವಿಭೂತಿಗಳೆಂದು ಶ್ರೀಪರಕಾಲಮಠಾದೀಶರು ಹೇಳುವರು. ಗುಣಪದದಿಂದ ಅನಂತಾನಂತಕಲ್ಯಾಣ-ಗುಣಗಳೂ, ವಿಗ್ರಹಪದದಿಂದ ಪರಮಾತ್ಮನ ದಿವ್ಯ ಮಂಗಳ ಮೂರ್ತಿಗಳೂ, ವಿಭೂತಿಪದದಿಂದ ನಿತ್ಯವಿಭೂತಿ ಮತ್ತು ಲೀಲಾವಿಭೂತಿಗಳೂ ಸಿದ್ಧವಾಗುತ್ತವೆ. ವಿಭೂತಿಯೆಂಬುದರಲ್ಲೇ ಚೇತನಾಚೇತನರು ಸೇರಿರುವರು.

'ಬ್ರಹ್ಮ ಎರಡು ವಿಧ' ಎಂಬ ವಾದವೂ ಬೌದ್ಧರಿಗಾಗಿಯೇ ಬಂದಿರುವುದು. ಏಕೆಂದರೆ, 'ಬ್ರಹ್ಮವು ಒಂದೂ ಆಗಬಹುದು ಎಂಬುದೇ ವಸ್ತುಸ್ಥಿತಿಯಾಗಿದೆ. **'ಏಕಮೇವಾದ್ವಿತೀಯಂ'** ಎಂಬ ವಾಕ್ಯದ ಸಮನಂತರವೇ **'ತದೈಕ್ಷತ ಬಹು ಸ್ಯಾಮ್'** ಎಂದಿರುವುದನ್ನೂ ನೋಡಬಹುದು. **'ಏಕತ್ವೇ ಸತಿ ನಾನಾತ್ವಂ ನಾನಾತ್ವೇ ಸತಿ ಚೈಕತಾ । ಅಚಿಂತ್ಯಂ ಬ್ರಹ್ಮಣೋ ರೂಪಂ ಕಸ್ತದ್ವೇದಿತುಮರ್ಹತಿ' ॥** ಫೇನ-ನೊರೆ, ಬುದ್ಬುದ-ನೀರ್ಗುಳ್ಳೆ, ತರಂಗ-ಅಲೆಗಳು; ಹೀಗೆ ಆರ್ಭಟಿಸುವ ಸಾಗರದ ಶಾಂತತೆಯನ್ನು ನೋಡಬೇಕಾದರೆ, ವಾಯುವಿನ ವೇಗವಿಲ್ಲದ ಶಾಂತಸಾಗರದತ್ತ ಹೋಗಬೇಕು. ಈ ವಾಯುವಿನ ಸ್ಥಾನದಲ್ಲೇ, ಬ್ರಹ್ಮದಲ್ಲಿರುವ ಅದ್ಭುತ ದಿವ್ಯಶಕ್ತಿಯನ್ನೇ ಮಾಯೆಯೆನ್ನುವರು. ಮಾಯೆಯಿಂದ ಮರುಳಾಗಿರುವ ಜೀವನು ಮಾಯೆಯನ್ನು ಚಿಂತಿಸಲೂ ಶಕ್ತನಲ್ಲ. ಮಾಯೆಯನ್ನು ದಾಟಲು ಇರುವ ಒಂದೇ ಉಪಾಯ **'ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ'**, ಅಷ್ಟೇ!

ಇಲ್ಲಿ ಒಂದು ಆಶ್ಚರ್ಯವನ್ನು ನೋಡಬಹುದು. ಒಂದು ಬೀಜದಿಂದ ಬೆಳೆದ ಮರದಲ್ಲಿ ಅನೇಕ ಹಣ್ಣುಗಳಾದಾಗ, ಆ ಹಣ್ಣುಗಳೊಳಗೆ ಬೀಜಗಳೂ ಅನೇಕವಿರುತ್ತವೆ. ಮೂಲವಾದ ಬೀಜವು ನಶಿಸಿಹೋಗಿಲ್ಲ. ಮರವಾಗಿ ನಿಂತಿದೆ. ಅದು ನಿಂತಿರುವಾಗಲೇ, ಪ್ರತಿಯೊಂದು ಹಣ್ಣಿನ ಒಳಗೂ ಆ ಮರವು ಬೀಜಗಳೊಳಗೆ ಅನೇಕವಾಗಿಯೂ ನಿಂತಿದೆ. ಇದು ಒಂದು ವರ್ಷದ ಕಥೆ. ಸಾವಿರಾರು ವರ್ಷಗಳು ಬದುಕಬಲ್ಲ ಒಂದು ಮರದ ಕಥೆಯನ್ನು ಯೋಚಿಸಲು ಈ ಅಲ್ಪಪ್ರಜ್ಞನಾದ ಜೀವನು ಸಮರ್ಥನೆ!

ಹೀಗೆ ಬ್ರಹ್ಮವು **'ಸಂಸಾರಮಹೀರುಹಸ್ಯ ಬೀಜಾಯ'** ಎಂದು ಹೇಳಿದಂತೆ ಸರ್ವಜಗತ್ತಿಗೆ ಬೀಜವಾಗಿ ಮೂಲಕಾರಣವಾಗುವುದರಿಂದಲೇ ಸರ್ವಾತ್ಮಕವೂ ಆಗಬಲ್ಲದೆಂಬುದನ್ನು ಉಪನಿಷತ್ತಿನ ಅನೇಕ ಕಡೆಗಳಲ್ಲಿ ನೋಡಬಹುದು.

ಬೋಧಾಯನರು ಯಾರು?

ಬ್ರಹ್ಮಸೂತ್ರಗಳ ವೃತ್ತಿಕಾರರಾದ ಬೋಧಾಯನರು ಯಾರು? ಅವರು ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನವನ್ನು ಬರೆದಿದ್ದರೆ? ಹಾಗಾದರೆ, ಶ್ರೀರಾಮಾನುಜರು ಮತ್ತೆ ಭಾಷ್ಯವನ್ನು ಏತಕ್ಕೆ ಬರೆದರು? ಇತ್ಯಾದಿ ಪ್ರಶ್ನೆಗಳು ಏಳುತ್ತವೆ. ಕಟ್ಟಾ ಅದ್ವೈತಿಗಳಾದ ಕೆಲಪಂಡಿತರುಗಳು 'ರಾಮಾನುಜರು ತಮ್ಮ ಭಾಷ್ಯವೇ ಸಂಪ್ರದಾಯಸಿದ್ಧವೆಂದು ತೋರಿಸಿಕೊಳ್ಳುವುದಕ್ಕಾಗಿ ಸುಳ್ಳನ್ನೇ ರಾಮಾನುಜರು ಹೇಳಿರುವರು' ಎಂದು ಪಾಪದ ಭಯವೆಳ್ಳಷ್ಟೂ ಇಲ್ಲದೇ ಹೇಳುವರು. ಆದರೆ ಕೊಚ್ಚಿಯ ಮಹಾರಾಜರೂ, ಮಹಾಸಂಸ್ಕೃತ ಪಂಡಿತರೂ ಆದ ಶ್ರೀಪರೀಕ್ಷಿತ್ ಮಹಾರಾಜರು 'ಹಾಗೆ ಹೇಳುವುದು ಮಹಾ ಸಾಹಸವೇ ಆಗುತ್ತದೆ' ಎಂದು ಹೇಳಿರುವರು. ಶ್ರೀಪರಕಾಲಮಠಾಧೀಶರು ತಮ್ಮ ಶ್ರೀಭಾಷ್ಯವ್ಯಾಖ್ಯಾನದಲ್ಲಿ ವಿಸ್ತಾರವಾಗಿ ಈ ವಿಷಯವನ್ನು ವಿಮರ್ಶಿಸಿರುವರು. ೧೦ನೇ ಶತಮಾನದ ಅದ್ವೈತಸಂಪ್ರದಾಯದ 'ಪ್ರಪಂಚಹೃದಯ' ಎಂಬ ಯೋಗಶಾಸ್ತ್ರದ ಗ್ರಂಥದಲ್ಲಿ, ಅವರ ಕಾಲ ಪರ್ಯಂತವಾಗಿ ಬೆಳೆದು ಬಂದ ಜ್ಞಾನದ ಪರಂಪರೆಯನ್ನು ಬಣ್ಣಿಸುವಾಗ ೨೦ ಅಧ್ಯಾಯಾತ್ಮಕವಾದ ಮೀಮಾಂಸಾ ಸೂತ್ರಗಳಿಗೆ (ಪೂರ್ವಮೀಮಾಂಸೆ ೧೨ ಅಧ್ಯಾಯ, ದೇವತಾಕಾಂಡ ೪ ಅಧ್ಯಾಯ, ಉತ್ತರಮೀಮಾಂಸೆ ೪ ಅಧ್ಯಾಯ, ಒಟ್ಟು ಮೀಮಾಂಸಾಶಾಸ್ತ್ರ ೨೦ ಅಧ್ಯಾಯ) ಬೋಧಾಯನರು ವಿಸ್ತಾರವಾದ ವೃತ್ತಿಯನ್ನು ಬರೆದರು. ಅದನ್ನು ಸಂಗ್ರಹಿಸಿ ಸ್ವಲ್ಪ ಲಘುವಾದ ವೃತ್ತಿಯನ್ನು ಉಪವರ್ಷರು ಬರೆದರು ಎಂದು ಹೇಳಿದ್ದಾರೆ. ದುರಾಗ್ರಹದಿಂದಲೂ, ವಿತಂಡಾವಾದದಿಂದಲೂ ಇದನ್ನೆಲ್ಲಾ ಅಲ್ಲಗೆಳೆಯುವವರಿಗೆ ಉತ್ತರವನ್ನು ಶ್ರೀಪರಕಾಲ ಮಠಾಧೀಶರೇ ಕೊಟ್ಟಿದ್ದಾರೆ. ಶ್ರೀರಾಮಾನುಜರು ಶ್ರೀಶಂಕರಾಚಾರ್ಯರನ್ನು ಖಂಡಿಸಿಬಿಟ್ಟರು ಎಂಬುದು ಕೆಲವರ ಕೋಪ. ಶ್ರೀಶಂಕರರನ್ನು ಅವರ ಸಮೀಪಕಾಲದವರಾದ ಭಾಸ್ಕರಾದಿಗಳೇ ಸ್ಪಷ್ಟವಾಗಿ ಬೌದ್ಧರೆಂದು

ಕರೆದಿರುವುದನ್ನು ನೋಡಿ, 'ಅದು ಸರಿಯಲ್ಲ, ಮೇಲುತೋರಿಕೆಯಲ್ಲಿ ಆ ಕಾಲದ ಸನ್ನಿವೇಶದಿಂದ ಕೆಲವು ವಾದಗಳು ಹಾಗೆ ಕಂಡುಬಂದರೂ, ಬೇರೆ ರೀತಿಯಾದ ವಾಕ್ಯಗಳೂ ಅಲ್ಲಲ್ಲಿ ಕಂಡು-ಬರುವುದರಿಂದಲೂ, ಶ್ರೀಶಂಕರರ ಸ್ತೋತ್ರ ಸಾಹಿತ್ಯಾದಿಗಳಿಂದಲೂ ಶ್ರೀಶಂಕರರು ಪರಮವೈದಿಕರೇ' ಎಂಬ ಅಭಿಪ್ರಾಯದಿಂದ, ವ್ಯಾಖ್ಯಾನಕಾರರ ಮತಗಳನ್ನೇ ಭಗವದ್‌ರಾಮಾನುಜರು ವಿಮರ್ಶಿಸಿದರು. ಆ ವೃತ್ತಿಗ್ರಂಥವು ಬಹಳ ಹಿಂದೆಯೇ ಲುಪ್ತವಾಗಿಬಟ್ಟಿತ್ತು. ಅದು ಸವಿಶೇಷಾದ್ವೈತಪರವಾಗಿತ್ತೆಂಬುದು, ದೊರೆತಿರುವ ಕೆಲವು ಭಾಗಗಳಿಂದಲೇ ತಿಳಿಯಲು ಸಾಧ್ಯವಾಗಿದೆ.

ಶ್ರೀಶಂಕರರ ಭಾಷ್ಯದಲ್ಲೇ ಅನೇಕ ಕಡೆ (ಬ್ರ.ಸೂ.೧-೧-೧೯,೧-೩-೧೯,೩-೩-೫೩ ಇತ್ಯಾದಿ) ವೃತ್ತಿಕಾರಮತವನ್ನು ಉಲ್ಲೇಖಿಸಿರುವುದರಿಂದ ವೃತ್ತಿಗ್ರಂಥ ಸುಳ್ಳಲ್ಲ. ಆದರೆ, ಬೌದ್ಧರನ್ನು ತೃಪ್ತಿಪಡಿಸಲು ವೈದಿಕರಾದ ವೃತ್ತಿಕಾರರ ಮತವನ್ನು ಆಚಾರ್ಯರು ಅಂಗೀಕರಿಸಲಿಲ್ಲ. ಶ್ರೀಶಂಕರಾಚಾರ್ಯರು ಬೋಧಾಯನರ ಶಿಷ್ಯರಾದ ಉಪವರ್ಷರನ್ನು 'ಭಗವಾನ್' ಎಂದೇ ಕರೆದಿದ್ದಾರೆ. ಉಪವರ್ಷರು ಪೂರ್ವೋತ್ತರಮೀಮಾಂಸಾವೃತ್ತಿಕಾರರೆಂದೂ ಅವರು ಹೇಳಿರುವರು (ಬ್ರ.ಸೂ.ಭಾ.೩-೩-೫೩). ಇಲ್ಲಿ ಅವರು ಹೇಳಿರುವುದನ್ನು ನೋಡಿದರೆ ಶ್ರೀರಾಮಾನುಜರಿಗೂ ಅವರಿಗೂ ವಾಸ್ತವಿಕವಾಗಿ ಅಭಿಪ್ರಾಯಭೇದಕ್ಕೆ ಕಾರಣವಿಲ್ಲ. ಈ ತತ್ತ್ವವನ್ನು ತಿಳಿಯಲಾರದೆ ಪಂಡಿತರುಗಳೇ ಪರಸ್ಪರ ಜಗಳವಾಡಿದರೆಂದೇ ತೋರುವುದು. ಪ್ರಪಂಚದ ಎಲ್ಲಾ ಮತಗಳಲ್ಲೂ, ಅವಾಂತರ ಭೇದಗಳಿಗೆ ಪಂಡಿತರುಗಳೇ ಕಾರಣರೆಂಬುದು ಸಂಶೋಧನೆಯಿಂದ ವ್ಯಕ್ತವಾಗುತ್ತದೆ. ಬ್ರಹ್ಮಸೂತ್ರಗಳಲ್ಲೇ ಅನೇಕ ಮಹರ್ಷಿಗಳ ಅಭಿಪ್ರಾಯಭೇದದ ಸೂಚನೆಯಿರುವುದರಿಂದ, ಗಹನವಾದ ಆತ್ಮತತ್ತ್ವದ ವಿಷಯದಲ್ಲಿ ಶುಷ್ಕಪಂಡಿತರ ಅಭಿಪ್ರಾಯಭೇದವು ಆಶ್ಚರ್ಯಕರವೇನಲ್ಲ.

ಪಂಡಿತರಲ್ಲಿ ವಿನಂತಿ

ಜಗತ್ತು ಸತ್ಯ ಎಂದು ಹೇಳುವ ಪಂಡಿತರುಗಳು ವಾಸ್ತವವಾದ ದೃಷ್ಟಿಯಿಂದಲೂ ಒಂದು ವಿಷಯವನ್ನು ಚಿಂತಿಸಬೇಕು. ಬ್ರಹ್ಮದಂತೆಯೇ ಜಗತ್ತು ಸತ್ಯವಾದರೆ, ಸತ್ಯವನ್ನು ಬಿಡಲು ಸಾಧ್ಯವೆ? ಸಾಲದ್ದಕ್ಕೆ ಶ್ರೀರಾಮಾನುಜರೇ ಜನ್ಮಾದ್ಯಧಿಕರಣದ ಕೊನೆಯಲ್ಲಿ 'ಸತ್ಯಪದದಿಂದ ಅಚೇತನವು ಮತ್ತು ಅದರೊಂದಿಗೆ ಬೆರೆತ ಚೇತನರು ವ್ಯಾವೃತ್ತರು' ಎಂದು ಸ್ಪಷ್ಟವಾಗಿಯೇ ಹೇಳಿದ್ದಾರೆ. ಇದರಿಂದ ಜಗತ್ತು ಬ್ರಹ್ಮದಂತೆ ಸತ್ಯವಲ್ಲವೆಂಬುದೇ ಶ್ರೀರಾಮಾನುಜರಿಗೂ ಸಮ್ಮತವೆಂಬುದು ಸ್ಪಷ್ಟ.

ಶ್ರೀಶಂಕರರೂ **'ಸತ್ಯಂ ಚಾನೃತಂ ಚ ಸತ್ಯಮಭವತ್'** (ತೈ.ಭೃ.೬) ಎಂಬಲ್ಲಿ 'ಬ್ರಹ್ಮ ಒಂದೇ ಪೂರ್ಣ ಸತ್ಯ — ಮರೀಚಿಕೆ (ಬಿಸಿಲುಗುದುರೆ) ಗಿಂತಲೂ ನೀರು ಮುಂತಾದವು ಸತ್ಯವಾಗುತ್ತದೆ. ಅಸತ್ಯವೆಂದರೆ, ಇದಕ್ಕಿಂತಲೂ ಬೇರೆಯಾದ್ದು' ಎಂದೇ ಕೊನೆಯಲ್ಲಿ ಹೇಳಿರುವರು. ಅನೃತವೇ

ಬೇರೆ, ಅಸತ್ಯವೇ ಬೇರೆ ಎಂಬುದನ್ನು ಪಂಡಿತರುಗಳು ಗಮನಿಸಬೇಕು. ಅಧ್ಯಾಸಭಾಷ್ಯದಲ್ಲೂ **'ಸತ್ಯಾನೃತೇ ಮಿಥುನೀಕೃತ್ಯ ಸರ್ವೋಽಪಿ ಲೋಕವ್ಯವಹಾರಃ'** ಎಂದೇ ಇದೆ, **'ಸತ್ಯಾಸತ್ಯೇ'** ಎಂದಿಲ್ಲ. ಆದ್ದರಿಂದ ಜಗತ್ತು ಪೂರ್ಣ ಸತ್ಯವಲ್ಲವೆಂಬ ಅಂಶ ಎರಡು ಆಚಾರ್ಯರಿಗೂ ಸಮಾನ.

ಲೋಕದ ಅನುಭವದಲ್ಲೂ ಪ್ರತಿಯೊಂದರಲ್ಲೂ ತಾರತಮ್ಯ ಕಂಡುಬಂದೇ ಬರುತ್ತದೆ. ಆದ್ದರಿಂದ, 'ಒಂದು ವಸ್ತುವನ್ನು ಯಾವ ಜಾಗದಲ್ಲಿ ಯಾವ ಸಮಯದಲ್ಲಿ ಯಾವ ರೀತಿಯಲ್ಲಿ ಕಂಡಿದ್ದೇವೋ, ಆ ವಸ್ತುವು ಕಾಲಾಂತರದಲ್ಲಿ 'ಹಾಗೆ ಕಂಡಿಲ್ಲ' ಎಂಬ ಬಾಧಕವಾದ ಜ್ಞಾನ ಬರದೇ ಇರುವುದರಿಂದ, ಆಯಾ ವಸ್ತುಗಳ ಸತ್ಯತ್ವವು ಆಂಶಿಕವಾಗಿರುತ್ತದೆಯೇ ಹೊರತು ಪೂರ್ಣಮಿಥ್ಯೆಯಾಗಿರುವುದಿಲ್ಲ. ಬ್ರಹ್ಮಕ್ಕೆ ಯಾವ ಕಾಲದಲ್ಲೂ, ಯಾವ ದೇಶದಲ್ಲೂ, ಯಾವ ರೀತಿಯಲ್ಲೂ ಬಾಧಕ ಜ್ಞಾನವು ಯಾರಿಗೂ ಇಲ್ಲದ್ದರಿಂದ ಬ್ರಹ್ಮವು ಪೂರ್ಣಸತ್ಯ, ಉಳಿದವು ಅಪೂರ್ಣಸತ್ಯವೆಂದೇ ಹೇಳಬೇಕು.

ಹೀಗೆಯೇ **'ಜಗತ್ತು ಮಿಥ್ಯೆ'** ಎಂದು ಹೇಳುವ ಪಂಡಿತರುಗಳೂ ಗಾಢವಾಗಿ ಚಿಂತಿಸಬೇಕು. ಬ್ರಹ್ಮಕ್ಕಿಂತಲೂ ಬೇರೆ ಎಲ್ಲವೂ ಮಿಥ್ಯೆಯಾದರೆ, **'ದ್ವಿರೂಪಂ ಬ್ರಹ್ಮಾವಗಮ್ಯತೇ' 'ಕಂ ದ್ವೇ ಬ್ರಹ್ಮಣೇ ಪರಮಪರಂ ಚೇತಿ? ಬಾಢಂ, ದ್ವೇ' 'ಏತದ್ವೈ ಸತ್ಯಕಾಮ, ಪರಂ ಚಾಪರಂ ಚ ಬ್ರಹ್ಮ'** ಇತ್ಯಾದಿ ವಾಕ್ಯಗಳಲ್ಲೂ **'ಕಾರ್ಯಂ ಬಾದರಿಃ' 'ಪರಂ ಜೈಮಿನಿಃ'** ಎಂಬ ಸೂತ್ರಗಳಲ್ಲೂ ಕಂಡುಬರುವ ಎರಡು ಬ್ರಹ್ಮಗಳಲ್ಲಿ, ಯಾವುದು ಸತ್ಯ, ಯಾವುದು ಮಿಥ್ಯೆ, ಹೇಗೆ ನಿರ್ಣಯಿಸುವುದು? ಸತ್ಯದಲ್ಲಿ ತಾರತಮ್ಯವನ್ನು ಒಪ್ಪದಿದ್ದರೆ, ಇವುಗಳನ್ನೆಲ್ಲಾ ನಿರ್ಣಯಿಸುವುದು ಬಹಳ ಕಷ್ಟವೇ ಆಗುತ್ತದೆ. 'ಸತ್ಯ ಎರಡಲ್ಲ, ಮೂರೂ ಇದೆ. ಪಾರಮಾರ್ಥಿಕ, ವ್ಯಾವಹಾರಿಕ, ಪ್ರಾತಿಭಾಸಿಕ ಎಂದು' ಎಂದರೆ, ಹಾಗಾದರೆ, ಸರ್ಪವು, ರಜ್ಜುಸರ್ಪ, ವಲ್ಮೀಕಸರ್ಪ ಎಂದು ಎರಡು ವಿಧ ಎಂದು ಹೇಳಬೇಕಾಗುತ್ತದೆ. ಇದೂ ಇಷ್ಟವೇ ಎಂದರೆ, ಸರ್ಪವು ಎರಡು ವಿಧ ಮಾತ್ರವಲ್ಲ. ವಂಶಸರ್ಪ, ಅಂಬುಧಾರಾಸರ್ಪ, ಭೂವಿದಳನಸರ್ಪ, ಮಾಲಾಸರ್ಪ ಇತ್ಯಾದಿ ಅನಂತವೇ ಆಗಬೇಕಾಗುತ್ತದೆ. ಸತ್ಯವನ್ನು ಮಿಥ್ಯೆಯನ್ನು ಒಟ್ಟು ಒಂದು ಗಣನೆಗೆ ತೆಗೆದುಕೊಳ್ಳುವುದನ್ನೂ ಯಾರೂ ಒಪ್ಪಲಾರರು.ಈ ಎಲ್ಲಾ ಗೊಂದಲಗಳನ್ನು ಪರಿಹರಿಸಬೇಕಾದರೆ ಸತ್ಯದಲ್ಲಿ ತಾರತಮ್ಯವನ್ನು ಒಪ್ಪಲೇಬೇಕು. ಒಂದು ನಿದರ್ಶನವನ್ನು ನೋಡೋಣ.

ಪರಮಪುಣ್ಯ ಗಂಗಾನದಿಯು ವಾರಾಣಸಿ ಕ್ಷೇತ್ರದಲ್ಲಿ ಹರಿಯುತ್ತದೆ. ಅದೇ ನದಿಯು ನಾಲೆಗಳ ಮೂಲಕವೂ, ನಲ್ಲಿಗಳ ಮೂಲಕವೂ ಮನೆ ಮನೆಗೆ ಹರಿದು ಬರುತ್ತದೆ. ಕೊನೆಗೆ ಕೈಕಾಲು ತೊಳೆಯುವುದಕ್ಕೂ ಅದೇ ಆಗುತ್ತದೆ. ಕೊನೆ ಕೊನೆಗೆ ತನ್ನ ಎಲ್ಲಾ ಪಾವನತ್ವವನ್ನು ಕಳೆದುಕೊಂಡು ದುರ್ಗಂಧದಿಂದ ಚರಂಡಿಯಲ್ಲೂ ಅದು ಹರಿಯುತ್ತದೆ. ಈ ಸ್ಥಿತಿಯಲ್ಲಿ ಆ ದುರ್ಗಂಧ ನೀರನ್ನು 'ಗಂಗೆಯ ನೀರು' ಎಂದು ಹೇಳುವುದರಲ್ಲಿ ಔಚಿತ್ಯವೇನಿದೆ? ಯೋಚಿಸಬೇಕು.

ಗಂಗೆಯ ಪಾವಿತ್ರ್ಯವು ಕ್ರಮಕ್ರಮವಾಗಿ ಕಿಡುವುದು ಮಾತ್ರವಲ್ಲ, ಪರಮ ಅಶುದ್ಧವಾಗಿಯೂ ಪರಿಣಮಿಸುವುದು ಎಲ್ಲರಿಗೂ ಪ್ರತ್ಯಕ್ಷಸಿದ್ಧ.

ಹೀಗೆಯೇ ಈ ಪ್ರಪಂಚವೂ ಸತ್ಯವಾದ ಪರಬ್ರಹ್ಮದಿಂದಲೇ ಆಗಿದ್ದರೂ, ಕ್ರಮಕ್ರಮವಾಗಿ ತನ್ನತನವನ್ನು ಕಳೆದುಕೊಳ್ಳುವುದು ಅನಿವಾರ್ಯ. ಇದನ್ನೇ 'ವಿವರ್ತ' ಎಂದಿದ್ದರು. ಅಷ್ಟು ಮಾತ್ರಕ್ಕೆ ಸುಳ್ಳೆಂದರ್ಥವಲ್ಲ. ಜೀವವರ್ಗದಲ್ಲಿ ಸ್ವಲ್ಪಮಟ್ಟಿಗೆ ಚೈತನ್ಯಾಂಶವಿದ್ದರೂ, ಪರಮಾತ್ಮನ ಗುಣಗಳನ್ನು ಕಳೆದುಕೊಳ್ಳುವುದು ಪ್ರತ್ಯಕ್ಷಸಿದ್ಧ. ಮತ್ತಷ್ಟು ದೂರಸರಿದಾಗ ಆ ಚೈತನ್ಯಾಂಶವನ್ನೂ ಕಳೆದುಕೊಂಡು ಜಡವೆನಿಸಿಕೊಳ್ಳುವುದಕ್ಕೂ ಅವಕಾಶವಿದೆ. ಒಂದು ಪ್ರಾಮಾಣಿಕವಾದ ವಚನವನ್ನು ನೋಡಬೇಕು -

'ಅಸ್ತಿ ಭಾತಿ ಪ್ರಿಯಂ ರೂಪಂ ನಾಮ ಚೇತ್ಯಂಶಪಂಚಕಂ ।
ಆದ್ಯತ್ರಯಂ ಬ್ರಹ್ಮನಿಷ್ಠಂ ಇತರತ್ತು ಜಗದ್ಗತಮ್' ।।

ಬ್ರಹ್ಮದಲ್ಲಿ ಅಸ್ತಿತ್ವ, ಸ್ವಪ್ರಕಾಶತ್ವ, ಆನಂದತ್ವ ಇವು ಪರಿಪೂರ್ಣವಾಗಿರುತ್ತವೆ. ಜಡವಸ್ತುವಿನಲ್ಲಿ ಅಸ್ತಿತ್ವ ಮಾತ್ರ, ಜೀವರಲ್ಲಿ ಅಸ್ತಿ, ಭಾತಿ ಮಾತ್ರ. ಬ್ರಹ್ಮದಲ್ಲಿ ಅಸ್ತಿತ್ವ, ಸ್ವಪ್ರಕಾಶತ್ವ, ಆನಂದತ್ವ ಮೂರೂ ಇರುವವು, ಬಾಹ್ಯವಾದ ನಾಮ ರೂಪಗಳಂತು ಜಡಕ್ಕೆ ಸೇರಿವೆ. ಆದರೆ, ಸಹಸ್ರ-ನಾಮಗಳಲ್ಲಿರುವ ಭಗವಂತನ ನಾಮರೂಪಗಳು ಜಡಪ್ರಪಂಚದ ನಾಮರೂಪಸಮಾನಗಳಲ್ಲ. ಎರಡಕ್ಕೂ ಬಹಳಷ್ಟು ಅಂತರಗಳಿವೆ. ಕತ್ತೆ, ಕುದುರೆ ಮುಂತಾದ ನಾಮಗಳು, ಭಗವಂತನ ನಾಮಗಳು ಎರಡೂ ಸಮಾನವಾಗಿ ಸುಳ್ಳೆ? ಆದ್ದರಿಂದ ಇವುಗಳ ತಾರತಮ್ಯಗಳನ್ನು ಸರಿಯಾಗಿ ತಿಳಿಯಬೇಕು. ಹೀಗೆ ಉಪಾದಾನವಾದ ಬ್ರಹ್ಮತತ್ತ್ವವು ಕ್ರಮಕ್ರಮವಾಗಿ ತನ್ನತನವನ್ನು ಕಳೆದುಕೊಳ್ಳುತ್ತಾ ಜಡವಾಗಿ ಆಗುವುದನ್ನೇ ವಿವರ್ತವಾದ ಎಂದು ಹೇಳುವರು.

ಆದ್ದರಿಂದ ಪಂಡಿತರುಗಳು ಹಠವಾದವನ್ನೂ ಪೂರ್ವವಾಸನೆಯನ್ನು ತ್ಯಜಿಸಿ ಗಂಭೀರವಾಗಿ ಚಿಂತಿಸಿದರೆ, ಶಾಸ್ತ್ರವೂ ಉದ್ದಾರವಾಗಿ ಜಗತ್ತಿಗೂ ಒಳ್ಳೆಯ ಮಾರ್ಗದರ್ಶನವನ್ನು ಖಂಡಿತವಾಗಿ ನೀಡಬಹುದು. ಇದಕ್ಕೆ ಕಾಲವೂ ಬಂದಿದೆ ಎಂದೂ ತೋರುತ್ತಿದೆ.

ಬ್ರಹ್ಮಸೂತ್ರರಚನೆಯ ಹಿನ್ನೆಲೆ

ಮೇಲ್ಕಂಡ ಸತ್ಯಾಂಶವನ್ನು ನಿರ್ಧರಿಸಲು ಶ್ರೀಬಾದರಾಯಣರಿಗೆ ಬ್ರಹ್ಮಸೂತ್ರ ರಚನೆಯ ಉದ್ದೇಶವೇನು? ಎಂಬ ಪ್ರಶ್ನೆಗೆ ಉತ್ತರವನ್ನೂ ಅರಿಯಬೇಕು.

ಬ್ರಹ್ಮಸೂತ್ರಗಳ ಮೊದಲನೆ ಅಧ್ಯಾಯ ಪೂರ್ತಿಯಾಗಿ ಸಾಂಖ್ಯಪ್ರಕ್ರಿಯೆಯ ಖಂಡನೆಯೇ ಆಗಿದೆ. ಸಾಂಖ್ಯರು ಜೀವ ಮತ್ತು ಪ್ರಕೃತಿ ತತ್ತ್ವದಿಂದಲೇ, ಅಂದರೆ ಎರಡು ತತ್ತ್ವಗಳಿಂದಲೇ ಸೃಷ್ಟ್ಯಾದಿಗಳನ್ನು ಸಮರ್ಥಿಸುತ್ತಾರೆ. ವೇದಾಂತಿಗಳಂತೂ ಇದರೊಂದಿಗೆ ಪರಮಾತ್ಮತತ್ತ್ವದ

ಆವಶ್ಯಕತೆಯನ್ನು ಹೇಳುತ್ತಾರೆ. ಚತುಸ್ಸೂತ್ರಿಯಲ್ಲಿ ಸಕಲ ಚೇತನಾಚೇತನ (ಜೀವ-ಪ್ರಕೃತಿ) ವಿಲಕ್ಷಣವಾದ ಪರಬ್ರಹ್ಮವೇ ಜಗತ್ತಿಗೆ ಮೂಲಕಾರಣವೆಂದು ಸಾಧಿಸಿಯಾಯಿತು. ಮುಂದಿನ ಸೂತ್ರಗಳಿಗೆ ಕೆಲಸವೇನು? ಎಂಬ ಸಂಶಯ ಬಂದರೆ, 'ಇದು ಸರಿಯಲ್ಲ, ಸಾಂಖ್ಯರು ದ್ವಿತತ್ತ್ವ(ಜೀವ-ಪ್ರಕೃತಿ)ದಿಂದಲೇ ಎಲ್ಲವನ್ನು ಸಮರ್ಥಿಸುತ್ತಾರೆ, ಪರಬ್ರಹ್ಮದ ಆವಶ್ಯಕತೆ ಏನು? ವೇದಾಂತಗಳೆಂಬ ಉಪನಿಷತ್ತುಗಳೂ ಇದನ್ನೇ ಹೇಳುತ್ತವೆ' ಎಂಬ ಆಕ್ಷೇಪಕ್ಕೆ ಸಮಾಧಾನವಾಗಿ, 'ಉಪನಿಷತ್ತುಗಳಲ್ಲಿ ಎಲ್ಲಿಯೂ ಸಾಂಖ್ಯರ ದ್ವಿತತ್ತ್ವವಾದಕ್ಕೆ ಪ್ರಸಂಗವೇ ಇಲ್ಲ' ಎಂದು ಹೇಳಲು, ಪ್ರತಿಯೊಂದು ವಾಕ್ಯವನ್ನು ಉದಾಹರಿಸಿ, 'ಇದು ಪ್ರಕೃತಿ-ಜೀವರನ್ನು ಹೇಳವುದಿಲ್ಲ. ಪರಮಾತ್ಮನನ್ನೇ ಹೇಳುತ್ತದೆ'? ಎಂಬುದನ್ನೇ ಎಲ್ಲಾ ಭಾಷ್ಯಕಾರರೂ ಹೇಳುತ್ತಾರೆ' ಎಂದು ಹೇಳುವುದೇ ಮೊದಲನೆಯ ಅಧ್ಯಾಯದ ಉದ್ದೇಶವಾಗಿದೆ. ಎರಡನೆಯ ಅಧ್ಯಾಯದ ಮೊದಲನೆಯ ಪಾದ ಸಾಂಖ್ಯಮತ ನಿರಾಕರಣೆಗಾಗಿಯೇ ಎಂಬುದರಲ್ಲಿ ವಿವಾದವೇ ಇಲ್ಲ. ಕರ್ತೃತ್ವಾದಿ ಅಧಿಕರಣಗಳು, 'ಪುರುಷನು ಕರ್ತನಲ್ಲ' ಎಂಬ ಸಾಂಖ್ಯರ ವಾದವನ್ನು ನಿರಾಕರಿಸುವುದಕ್ಕಾಗಿಯೇ ಇರುತ್ತವೆ. ಮೂರನೆಯ ಅಧ್ಯಾಯದಲ್ಲೂ ಮೋಕ್ಷೋಪಾಯವು 'ಭಕ್ತಿ ಎಂಬ ಉಪಾಸನೆಯೇ ಹೊರತು, ಸಾಂಖ್ಯರು ಹೇಳುವ ಪ್ರಕೃತಿ ಪುರುಷ ವಿವೇಚನೆಯಲ್ಲ'ವೆಂಬ ವೈದಿಕಸಿದ್ಧಾಂತವೇ ಸ್ಥಾಪಿಸಲ್ಪಟ್ಟಿದೆ. ಳನೆಯ ಅಧ್ಯಾಯದಲ್ಲೂ 'ಸಾಂಖ್ಯರ ಕೈವಲ್ಯವು ಪರಮಪುರುಷಾರ್ಥವಲ್ಲ, ಪರಮಾತ್ಮನೊಂದಿಗೆ ಸೇರಿ, ಅದರಿಂದ ಆಗುವ ಸ್ವರೂಪಾವಿರ್ಭಾವವೇ ಪರಮಪುರುಷಾರ್ಥ' ಎಂದೇ ಸ್ಥಾಪಿಸಲ್ಪಡುತ್ತದೆ.

ಇದರ ಮೇಲೂ-'ಭಗವದ್ಗೀತೆಯ ೨ನೇ ಅಧ್ಯಾಯದಲ್ಲಿ ಜ್ಞಾನಯೋಗ ಮತ್ತು ಕರ್ಮಯೋಗ ಎರಡನ್ನೂ ಕುರಿತಾದ ಪ್ರಶಂಸೆಗಳಿಗೆ ಏನರ್ಥ' ಇತ್ಯಾದಿ ಸಂಶಯಗಳು ಬರುವುದು ಸಹಜ. ಆದರೆ, ಈಗಿನ ಪಂಡಿತರ ಬುದ್ಧಿಯಲ್ಲಿರುವ ಸಾಂಖ್ಯ ಮುಂತಾದ ದರ್ಶನಗಳ ಸ್ವರೂಪಗಳೇ ಬೇರೆ, ವಸ್ತುಸ್ಥಿತಿಯೇ ಬೇರೆಯೆಂಬುದೇ ಸಂಗ್ರಹವಾದ ಉತ್ತರವಾಗಿದೆ. ಎಲ್ಲವೂ ಸಾಂಕರ್ಯಮಯವಾಗಿ ಬಿಟ್ಟಿರುವಾಗ, ಸ್ವಲ್ಪ ಸಹನೆಯೇ ಈವಾಗ ಬೇಕಾಗಿದೆ. ಒಟ್ಟಿನಲ್ಲಿ ಸಾಂಖ್ಯರು ದ್ವಿತತ್ತ್ವವಾದಿಗಳು, ವೈದಿಕರು ತ್ರಿತತ್ತ್ವ-ವಾದಿಗಳೆನ್ನುವುದರಲ್ಲಿ ಸಂಶಯವಿಲ್ಲ.

ಹೀಗೆ ಸಾಂಖ್ಯರೇ ವೇದಾಂತಸೂತ್ರಗಳ ಪ್ರಧಾನಪೂರ್ವಪಕ್ಷಿಗಳು ಎನ್ನುವುದನ್ನು ಪ್ರತಿಯೊಂದು ಕಡೆಯಲ್ಲೂ ಹೇಳಿದೆ ಎಂದು ತಿಳಿದಾಗ ದ್ವಿತತ್ತ್ವವಾದ ವೈದಿಕವಲ್ಲ, ತ್ರಿತತ್ತ್ವವಾದವೇ ವೈದಿಕ ಎಂಬ ನಿಶ್ಚಯಕ್ಕೆ ಬರುವುದರಿಂದ, ನಿರ್ವಿಶೇಷವಾದಕ್ಕೆ ಉಪನಿಷತ್ತುಗಳು ಅನುಕೂಲವೇ ಅಲ್ಲ, ತ್ರಿತತ್ತ್ವವಾದವೇ ವೈದಿಕವೆನ್ನುವುದು ಸ್ಥಾಪಿತವಾಗುತ್ತದೆ. ಈ ತ್ರಿತತ್ತ್ವವಾದವೂ ಕೊನೆಯಲ್ಲಿ ಬ್ರಹ್ಮವಾದದಲ್ಲೇ ಅಡಗುತ್ತದೆ ಎಂದು **'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮ'** ಎಂಬ ಶ್ರುತಿ (ಶ್ವೇ.ಉ.೧-೧೨) ಸ್ಪಷ್ಟವಾಗಿ ಹೇಳಿದೆ.

ಸತ್ಯಕ್ಕೆ ಅಥವಾ ಮಿಥ್ಯಾತ್ವದಲ್ಲಿ ತಾರತಮ್ಯ

ಒಗೆ ಕೂಲಂಕಷವಾಗಿ ಎಲ್ಲವನ್ನೂ ವಿಮರ್ಶಿಸಿದರೆ, ಶ್ರೀರಾಮಾನುಜರಿಗೂ, ಶ್ರೀಶಂಕರರಿಗೂ ಅಭಿಪ್ರಾಯಭೇದಕ್ಕೆ ಸರಿಯಾದ ಕಾರಣವೇ ಇಲ್ಲ. ಅಲ್ಪ ವಿಷಯಗಳಲ್ಲಿ ಅನಾವಶ್ಯಕವಾಗಿ ಬುದ್ಧಿಯನ್ನು ಕೆಡಿಸಿಕೊಳ್ಳುವುದರಿಂದ ಅದು ಅವರವರಿಗೇ ಅನರ್ಥಕಾರಿ ಎಂಬುದೇ ಸತ್ಯ.

ಎಲ್ಲಕ್ಕಿಂತಲೂ ಜ್ಞಾನಗಳಲ್ಲೂ ಎಲ್ಲರೂ ಎಲ್ಲಾ ಕಾಲಕ್ಕೂ ಎಲ್ಲಾ ರೀತಿಯಲ್ಲೂ ಸಂಪೂರ್ಣರಾಗಿರಲೂ ಸಾಧ್ಯವಿಲ್ಲದ್ದರಿಂದ, ಪರಮಾತ್ಮನೇ ಸತ್ಯವನ್ನು ಆಯಾ ಕಾಲಕ್ಕೆ ತಕ್ಕಂತೆ ಪ್ರಕಟಪಡಿಸುತ್ತಾನೆ ಎಂದರಿಯಬೇಕು. ಒಗೆ ಜ್ಞಾನಿಗಳಲ್ಲೂ ತಾರತಮ್ಯ ಅನಿವಾರ್ಯವೆಂಬುದನ್ನು ಶ್ರೀರಾಮಾನುಜರೇ -

'ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ' ॥ (ಭ.ಗೀ.೭-೩)

ಎಂಬ ಪದ್ಯದ ವ್ಯಾಖ್ಯಾನದಲ್ಲಿ - 'ಮನುಷ್ಯರನೇಕರಲ್ಲಿ ಯಾರೋ ಕೆಲವರು ಮಾತ್ರ ಮುಕ್ತಿಯನ್ನು ಪಡೆಯಲು ಅಥವಾ ಪೂರ್ಣ ಸತ್ಯವಸ್ತುವಿಯಲು ಯತ್ನಿಸುತ್ತಾರೆ. ಅವರಲ್ಲಿ ಕೆಲವರು ಸ್ವಲ್ಪಮಟ್ಟಿಗೆ ಮಾತ್ರ ಜ್ಞಾನಿಗಳಾಗುತ್ತಾರೆ. ಅವರಲ್ಲೂ ಯಾರೊ ಒಬ್ಬರು ಮಾತ್ರ, ತತ್ತ್ವತಃ ಪೂರ್ಣವಾಗಿ ಸತ್ಯವಸ್ತುವಿಯುತ್ತಾರೆ' ಎಂದಿದ್ದಾರೆ. ಕೊನೆಯಲ್ಲಿ **'ತತ್ತ್ವತಃ'** ಎಂದಿರುವುದರಿಂದ, ಅನೇಕರು ಅಪರಿಪೂರ್ಣರಾಗಿಯೇ ಇರುತ್ತಾರೆ. ಆತ್ಮತತ್ತ್ವವು ಅತ್ಯಂತ ಅತ್ಯಂತ ಗಹನವಾದ್ದು. ಇದರಿಂದಲೇ ಭಗವತ್ ರಾಮಾನುಜರು ವೇದಾರ್ಥಸಂಗ್ರಹದಲ್ಲಿ 'ಭೇದವೇ? ಅಭೇದವೇ? ಭೇದಾಭೇದವೇ? ಯೆಂದು ಸಂಶಯಿಸಲಾಯಿತು'? ಎಂದು ಪ್ರಶ್ನಿಸಿಕೊಂಡು **'ಸರ್ವಥಾಪಿ ವೇದವೇದ್ಯತ್ವಾತ್ ಸರ್ವಂ ಸಮಂಜಸಮ್'** ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಅವರು ಕೇವಲ ಭೇದವಾದಿಗಳಲ್ಲವೆಂಬುದೂ ಸ್ಪಷ್ಟವಾಗಿದೆ, ಉತ್ತರ ಏನು ಹೇಳಿದಂತಾಯಿತು? ಎಂದರೆ - ಸೃಷ್ಟಿಗೆ ಮೊದಲು ಬೀಜದಲ್ಲಿ ವೃಕ್ಷವಿರುವಂತೆ ಬ್ರಹ್ಮದಲ್ಲಿ ಜಗತ್ತೆಲ್ಲವೂ ಅಡಗಿ ಒಂದೇ ವಸ್ತು ಆಗಿತ್ತು. ಕೊನೆಯ ಲಯದಲ್ಲೂ, ಅಂದರೆ ಪ್ರಳಯದಲ್ಲಿ ಹಣ್ಣು ಆದಾಗ ಎಲ್ಲವೂ ಬೀಜದಲ್ಲಿ ಲಯಿಸಿ ಒಂದೇ ಆಗುತ್ತದೆ. ಮಧ್ಯಕಾಲದಲ್ಲಂತು ಎಲೆ, ಹೂವು, ಕಾಯಿ ಇತ್ಯಾದಿಯಾಗಿ ಅನೇಕತತ್ವವಿರುತ್ತದೆ. ಆದ್ದರಿಂದ ಎಲ್ಲವನ್ನೂ ಆಯಾ ಕಾಲಕ್ಕೆ ತಕ್ಕಂತೆ ಭೇದವು ಅಭೇದವೂ ಇರುವುದರಲ್ಲಿ ವಿರೋಧವಿಲ್ಲವೆಂಬುದೇ ಅವರ ಅಭಿಪ್ರಾಯ. ಉಪನಿಷತ್ತುಗಳಲ್ಲಿ, ಬ್ರಹ್ಮಸೂತ್ರಗಳಲ್ಲಿ ಭೇದವನ್ನು ಹೇಳುವಾಗ **'ಭಿನ್ನ'** ಎಂದು ಹೇಳದೆ, ಎಲ್ಲಾ ಕಡೆಯಲ್ಲೂ **'ಅನ್ಯ'** ಪದವೇ ಕಂಡುಬರುವುದನ್ನು ಗಮನಿಸಬೇಕು. ಹೀಗೆಯೇ ಅಭೇದವನ್ನು ಹೇಳುವಾಗ **'ಅನನ್ಯ'**ವೆಂದು ಹೇಳಿರುವುದನ್ನು ಗಮನಿಸಬೇಕು. **'ಅನ್ಯ'** ಪದದಲ್ಲಿ ಅಡಗಿರುವ ಭೇದವು **'ಭಿನ್ನ'** ಪದದಲ್ಲಿ ಅಡಗಿರುವ ಭೇದಕ್ಕಿಂತಲೂ ಅತ್ಯಂತ ವಿಲಕ್ಷಣವಾದ್ದರಿಂದ ಭೇದದಲ್ಲೇ

ತಾರತಮ್ಯ ಇರುವುದೆಂದು ತಿಳಿಯುವುದೇ ಸರ್ವ ಪ್ರಶ್ನೆಗೂ ಉತ್ತರವೆಂಬುದೇ ವಸ್ತುಸ್ಥಿತಿಯೆಂದರಿಯುವುದೆ ಅತ್ಯಂತ ಶ್ರೇಯಸ್ಕರ. ಇದನ್ನೇ ತ್ರಿಕಾಲ ಸತ್ಯವೆನ್ನಬಹುದು. ಇದರಿಂದ ಸತ್ಯತ್ವ-ಮಿಥ್ಯಾತ್ವಾದಿಗಳಲ್ಲೂ ತಾರತಮ್ಯವನ್ನರಿಬಹುದು.

ಹೀಗೆ, **'ಅಸ್ಯ'** ಮತ್ತು **'ಅನಸ್ಯ'** ಪದಗಳಲ್ಲಿ ಅಡಗಿರುವ ಭೇದದ ತಾರತಮ್ಯವನ್ನು, ಅನುಭವ ಪೂರ್ವಕವಾಗಿ ಅರಿತರೆ, ಎಲ್ಲಾ ವಾದಗಳಿಗೂ ಉತ್ತರ ಸಿಗುತ್ತದೆ. ಆಚಾರ್ಯರೆಲ್ಲರೂ ಮಹಾಜ್ಞಾನಿಗಳೇ ಆಗಿದ್ದರೂ, ಆಯಾ ಕಾಲ, ದೇಶ, ಸನ್ನಿವೇಶ ಇವುಗಳಿಗೆ ತಕ್ಕಂತೆ ವಿಷಯಗಳನ್ನು ಪ್ರತಿಪಾದಿಸುವುದು ಅನಿವಾರ್ಯವಾಗುತ್ತದೆ ಎಂಬ ಅಂಶವನ್ನು ನಾವು ಅರಿಯಬೇಕು.

ವೇದಾರ್ಥಸಂಗ್ರಹದಲ್ಲಿ **'ಏತಾವತಾ ಭೇದೋ ವಾ, ಅಭೇದೋ ವಾ ದ್ವ್ಯಾತ್ಮಕತಾ ವಾ ಕೋಯಮರ್ಥಃ ಸಮರ್ಥಿತಃ'**? ಎಂದು ತಾನೇ ಪ್ರಶ್ನಿಸಿಕೊಂಡು **'ಸರ್ವಸ್ಯಾಪಿ ವೇದವೇದ್ಯತ್ವಾತ್ ಸರ್ವಂ ಸಮರ್ಥಿತಮ್'** ಎಂದೇ ಉತ್ತರವನ್ನು ಹೇಳಿರುವರು. ಭಾಸ್ಕರಾದಿಗಳು ಕೇವಲ ಭೇದಾಭೇದವಾದಿಗಳು. ವೇದಾರ್ಥಸಂಗ್ರಹದಲ್ಲೂ, ಶ್ರೀಭಾಷ್ಯದ ಸಮನ್ವಯಾಧಿಕರಣದಲ್ಲೂ ಭೇದಾಭೇದವಾದದ ವಿಸ್ತಾರವಾದ ವಿವೇಚನೆಯನ್ನೂ ನೋಡಿದರೆ ಶ್ರೀರಾಮಾನುಜರು ಕೇವಲ ಭೇದಾಭೇದವಾದಿಗಳಲ್ಲ, ಸರ್ವಸಮನ್ವಯವಾದಿಗಳೆಂಬುದು ಸ್ಪಷ್ಟವಾಗುವುದು. ಸರ್ವಾಪಲಾಪವಾದಿಗಳಾದ ಮಾಧ್ಯಮಿಕರು **'ಚತುಷ್ಕೋಟಿವಿನಿರ್ಮುಕ್ತಂ ತತ್ತ್ವಮ್'** ಎಂದು ಹೇಳಿದರೆ ಬ್ರಹ್ಮತತ್ತ್ವವು ಸರ್ವಾತ್ಮಕವೆಂಬುದೇ ವೈದಿಕರ ನಿಲುವೆಂಬುದೇ ಸಾರ.

ಉಪಸಂಹಾರ

ಹೀಗೆ ಬ್ರಹ್ಮಸೂತ್ರಗಳ ರಚನೆಗೆ ಹಿನ್ನೆಲೆ ಸಾಂಖ್ಯದರ್ಶನವಾದ್ದರಿಂದ ಸಾಂಖ್ಯರ ದ್ವಿತತ್ತ್ವವಾದದಿಂದ ಜಗತ್ತಿನ ಸೃಷ್ಟಿಸ್ಥಿತಿಪ್ರಳಯಗಳನ್ನು ಸಮರ್ಥಿಸಲು ಸಾಧ್ಯವಿಲ್ಲ; ವೈದಿಕರ ಭೋಕ್ತಾ-ಭೋಗ್ಯ-ಈಶ್ವರ ಎಂಬ ತ್ರಿತತ್ತ್ವವಾದದಿಂದಲೇ ಜಗತ್ತಿನ ಸೃಷ್ಟಿ-ಸ್ಥಿತಿ-ಪ್ರಳಯಗಳನ್ನು ಸಮರ್ಥಿಸಬೇಕು ಎಂಬುದು ಸ್ಪಷ್ಟ.

ಇದರಿಂದ ಶ್ರೀ ಶಂಕರರ ಅಧ್ಯಾಸಭಾಷ್ಯವು ಆಗಿನ ಸನ್ನಿವೇಶದ ಪ್ರಭಾವದಿಂದ ಅನಿವಾರ್ಯವಾಯಿತೆ ಹೊರತು ಬ್ರಹ್ಮಸೂತ್ರಗಳ ತಾತ್ಪರ್ಯಕ್ಕೆ ಅದು ಪೋಷಕವಾಗಲಾರದು. ಯುಕ್ತಿಸಿದ್ಧವಾದ ಅರ್ಥವೇ ಬ್ರಹ್ಮಸೂತ್ರಗಳಿಗೆ ಸಮ್ಮತವೆಂದು ನಾವು ಇಲ್ಲಿ ತೋರಿಸುತ್ತೇವೆ' ಎಂಬ ವಿನ್ಯಾಸವೂ, ಮುಂದಿನ **'ಸೂತ್ರಾಣಿ ಯಥಾಕಥಂಚಿತ್ ಯೋಜನೀಯಾನಿ'** (೧-೧-೬) ಎಂಬ ವಿನ್ಯಾಸವೂ ಅವರ ಅಂತರಂಗವನ್ನು ಸೂಚಿಸಿದರೂ, ವ್ಯಾಖ್ಯಾನಕಾರರು ಆಚಾರ್ಯರ ಅಂತರಂಗವನ್ನರಿಯಲು ಸಮರ್ಥರಾಗದಿರುವುದಕ್ಕೆ ಆತ್ಮತತ್ತ್ವವೇ ಒಂದು ವಿಧದಲ್ಲಿ ಸಮಸ್ಯಾತ್ಮಕವೆಂಬಂಶ ಮತ್ತು ಪೂರ್ವವಾಸನೆಯೇ ಕಾರಣವೆಂಬುದು ಸ್ಪಷ್ಟವಾಗುತ್ತದೆ.

ಇದಕ್ಕೆ ನೇರೆದುರಾಗಿ, **'ಪ್ರಾಚೀನರ ವ್ಯಾಖ್ಯಾನವನ್ನನುಸರಿಸಿ ಸೂತ್ರಗಳಿಗೆ ಸ್ವರಸ ಸಿದ್ಧವಾದ ಅರ್ಥವನ್ನೇ ತೋರಿಸಲಾಗುತ್ತದೆ'** ಎಂಬ ಶ್ರೀಭಾಷ್ಯದ ಪೀಠಿಕೆಯನ್ನು ನೋಡಿದರೆ ಎರಡರ ತತ್ತ್ವಸ್ಥಿತಿಯು ಅರ್ಥವಾಗದಿರಲಾರದು.

ಜಗತ್ತು ಯಾವತ್ತು ಒಂದೇ ರೀತಿಯಲ್ಲಿರಲು ಸಾಧ್ಯವಿಲ್ಲ. ಸತ್ತ್ವರಜಸ್ತಮೋಗುಣಗಳ ಪ್ರಭಾವವು ಸದಾ ಆಗುತ್ತಿರುವುದರಿಂದ ಎಲ್ಲರೂ ಒಂದೇ ರೀತಿಯಲ್ಲಿ ಚಿಂತಿಸಲು ಹೇಗೆ ಸಾಧ್ಯ? ವೈಷಮ್ಯವೇ ಸೃಷ್ಟಿ, ಸಾಮ್ಯವೇ ಲಯವೆಂಬುದು ವಿಜ್ಞಾನದಿಂದ ಸಿದ್ಧವಾದ ವಿಷಯ. **'ಭಿನ್ನರುಚಿರ್ಹಿ ಲೋಕಃ'** ಎಂಬುದೇ ಎಲ್ಲಾ ಕಾಲಕ್ಕೂ ಅನ್ವಯಿಸುವ ನ್ಯಾಯ. ಆದ್ದರಿಂದ ಎಲ್ಲಾ ಜನರನ್ನು ಒಂದೇ ರೀತಿಗೆ ಕಟ್ಟಹಾಕಿಡಲು ಯಾರಿಂದಲೂ, ಎಂದಿಗೂ ಸಾಧ್ಯವಿಲ್ಲ. ಅವರವರಿಗೆ ಯಾವುದು ರುಚಿಸುವುದೊ, ಅದರಂತೆ ಅವರವರು ವರ್ತಿಸುವುದೇ ಸಹಜ. ಯಾವ ಅಭಿಪ್ರಾಯವನ್ನೂ ಯಾರ ಮೇಲೂ ಹೊರಿಸಲು ಶ್ರಮಿಸಬೇಕಾದ ಅಗತ್ಯವೂ ಇಲ್ಲ. ಅಂದರೆ, ಪರರ ಭಿನ್ನಾಭಿಪ್ರಾಯಗಳನ್ನು ಸಹಿಸಿಕೊಳ್ಳುವುದೂ ಶಾಂತಿಗೆ ಪ್ರಧಾನವಾದ ಮಾರ್ಗ. ಮಹರ್ಷಿಗಳ ಅಭಿಪ್ರಾಯವೂ ಎಲ್ಲಕ್ಕೂ ಅವಕಾಶ ಕೊಡುವುದರಿಂದ ಆತ್ಮತತ್ತ್ವದ ವಿಷಯದಲ್ಲಿ, ಕುರುಡರು ಆನೆಯನ್ನು ಕಂಡಂತೆ ಆಗಬಾರದು.

ಮೂಲಭೂತವಾಗಿ ಒಂದು ಸೂಕ್ಷ್ಮಾಂಶವನ್ನು ಎಲ್ಲರೂ ಗಮನಿಸಬೇಕು. **'ಶಬ್ದಾರ್ಥ-ಪ್ರತ್ಯಯಾನಾಮಿತರೇತರಾಧ್ಯಾಸಾತ್ಸಂಕರಃ'** (ಯೋ.ಸೂ.೩-೧೭) ಎಂದು ಯೋಗಸೂತ್ರವಿದೆ. ವ್ಯಾಕರಣನಿಯಮದಂತೆ 'ಪ್ರತ್ಯಯ' ಪದವು ಅಥವಾ ವಸ್ತು. ವಸ್ತುವಿನ ಸ್ಥಿತಿ, ಅದರ ಅನುಭವ, ಅದರ ವ್ಯವಹಾರ ಎಂಬುದು ಕ್ರಮ. ಈ ಮೂರರ ಸಾಂಕರ್ಯ ಬೆರಕೆ ಸಹಜ. ವಿಮರ್ಶಕನಿಗೆ ಮೂರನ್ನೂ ಬೇರ್ಪಡಿಸಿ ಚಿಂತಿಸುವ ಶಕ್ತಿಯಿದ್ದಾಗಲೇ ವಿಮರ್ಶೆ ಪ್ರಾಮಾಣಿಕವಾಗುತ್ತದೆ. ಇಲ್ಲದಿದ್ದರೆ, ಸಾಂಕರ್ಯ ಮತ್ತು ಗೊಂದಲ ಅನಿವಾರ್ಯ. ಅಭಿಪ್ರಾಯ ಭೇದಗಳಿಗೆಲ್ಲಾ ಇದೇ ಮೂಲವಾಗಿದೆ. ಅಂತಹ ಶಕ್ತಿಯಿಲ್ಲದವರು ವಿಮರ್ಶೆಗೆ ಇಳಿಯಲೇಬಾರದು. ಇದಲ್ಲದೆ, ಶ್ರೀಭಾಗವತದಲ್ಲಿ (೩-೩-೩) 'ಶಬ್ದದಲ್ಲಿ ಒಂದು ಮಾಯೆ ಇದೆ. ಅರ್ಥ ಆಗದೆ ಇದ್ದರೂ, ಅರ್ಥವಾದಂತೆ ಭ್ರಮೆಯನ್ನು ಹುಟ್ಟಿಸುತ್ತದೆ' ಎಂಬ ಸೂಕ್ಷ್ಮಾಂಶವನ್ನು ಹೇಳಿದೆ. ಅತೀಂದ್ರಿಯವಾದ ವಸ್ತುಗಳ ವ್ಯವಹಾರದಲ್ಲಿ ಇದನ್ನು ನೋಡಬಹುದು. ಆದ್ದರಿಂದ ಎಚ್ಚರಿಕೆ ಅತ್ಯಾವಶ್ಯಕ.

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ ।
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಂ ಮನಸ್ಸದಾ ।।

ಎಂಬ ಆರ್ಷವಚನದಲ್ಲಿರುವ ಹಿತವನ್ನರಿತು ತನ್ನನ್ನು ತಾನು ಕಾಪಾಡಿಕೊಳ್ಳುವುದೇ ಜಾಣ್ಮೆಯಾಗುವುದು.

ಬ್ರಹ್ಮಸೂತ್ರಗಳು ಶ್ರುತಿಗಳ ಅರ್ಥವನ್ನು ನಿರ್ಣಯಿಸುವ ನ್ಯಾಯಗಳನ್ನು ನಿರೂಪಿಸುವುದಕ್ಕಾಗಿ ಬಂದವೇ ಹೊರತು, ಅವು ಕೇವಲ ಧರ್ಮಗ್ರಂಥವಾದ ಸ್ಮೃತಿಗಳಿಗೆ ಸಮಾನವಲ್ಲ. ಇಲ್ಲದಿದ್ದರೆ, ಅನ್ಯೋನ್ಯಾಶ್ರಯದೋಷವು ಅನಿವಾರ್ಯ. ಈ ಅಂಶವು ಮಹಾದಾರ್ಶನಿಕರಾದ ಶ್ರೀಶಂಕರಾಚಾರ್ಯರಿಗೆ ತಿಳಿಯದಿರಲು ಸಾಧ್ಯವೇ ಇಲ್ಲ. ಮಹಾಮೀಮಾಂಸಕರಾದ ಭಾಮತೀಕಾರರಿಗೂ ತಿಳಿಯದಿರಲು ಸಾಧ್ಯವೂ ಇಲ್ಲ. ಸಾರವಾಗಿ ಹೇಳುವುದಾದರೆ, ಶ್ರೀಶಂಕರರು ಪ್ರಾರಂಭಿಸಿದ ವೈದಿಕಸಂಸ್ಕೃತಿಯ ಪುನರುತ್ಥಾನವನ್ನು ಶ್ರೀರಾಮಾನುಜರು ಪೂರೈಸಿದರೆಂಬುದೇ ಸತ್ಯ. ಇದನ್ನು ಎರಡೂ ಕಡೆಯ ಕೆಲವು ಸಂಪ್ರದಾಯವಾದಿಗಳು(!) ಒಪ್ಪದಿದ್ದರೆ, 'ಸತ್ಯ' ಎಂದೂ ಕಹಿಯಾದ್ದೇ ಎಂಬುದೇ ಉತ್ತರ. ಎಲ್ಲವನ್ನು ಯೋಚಿಸಿದರೆ **'ಕಾಲಾಯ ತಸ್ಮೈ ನಮಃ'** ಎಂದೇ ಹೇಳಬೇಕಾಗಿದೆ.

ಸಜ್ಜನ ವಿಧೇಯ

ಪಂಡಿತರತ್ನಂ ಕೆ.ಎಸ್. ವರದಾಚಾರ್ಯ